ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಅಕ್ಟೋಬರ್ 01, 2021

ಸಂಪುಟ : 48 ಸಂಚಿಕೆ : 141 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com

## ಉಚಿತ ಮರಳು ಹಂಚಿಕೆ ಪ್ರಸ್ತಾವನೆ ಇಲ್ಲ: ಆಚಾರ್

ಬೆಂಗಳೂರು, ಸೆ. 30- ಉಚಿತ ಮರಳು ನೀಡುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಹಾಲಪ್ಪ ಆಚಾರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಮರಳು ನೀತಿಯಲ್ಲೂ ಉಚಿತ ಮರಳು ನೀಡುವ ಪ್ರಸ್ತಾಪವಿಲ್ಲ. ಬಡವರು ಮತ್ತು ಜನಸಾಮಾನ್ಯರು ಮನೆ ಕಟ್ಟಲು ಉಚಿತವಾಗಿ ಮರಳು ನೀಡಲು ಹಿಂದೆ ಹೇಳಲಾಗಿತ್ತು. ಆದರೆ ಸದ್ಯಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ 4.50 ಕೋಟಿ ಟನ್ ಮರಳು ಅವಶ್ಯಕತೆ ಇದ್ದರೆ, ಕೇವಲ 3.50 ಕೋಟಿ ಟನ್ ಮರಳು ಪೂರೈಕೆ (3ನೇ ಪುಟಕ್ಕೆ)

## ಸಿ.ಎಂ. ರಾಜಕೀಯ ಕಾರ್ಯದರ್ಶಿ ಆಗಿ ಎಂ.ಪಿ. ರೇಣುಕಾಚಾರ್ಯ



ಬೆಂಗಳೂರು, ಸೆ. 30- ಮುಖ್ಯಮಂತ್ರಿ ರಾಜಕೀಯ ಕಾರ್ಯ ದರ್ಶಿಗಳಾಗಿ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಹಾಗೂ ಮಾಜಿ ಸಚಿವ ಡಿ.ಎನ್. ಜೀವರಾಜ್ ನೇಮಕ ಗೊಂಡಿದ್ದಾರೆ. ಇಬ್ಬರಿಗೂ ಸಂಪುಟ ದರ್ಜೆಯ ಸ್ಥಾನಮಾನ ನೀಡಲಾಗಿದೆ. ಈ ಹಿಂದೆ ಯಡಿಯೂರಪ್ಪನವರು ಮುಖ್ಯಮಂತ್ರಿ ಯಾಗಿದ್ದ ಆಡಳಿತಾವಧಿ ಯಲ್ಲೂ ಇವರಿಬ್ಬರೂ ರಾಜಕೀಯ ಕಾರ್ಯದರ್ಶಿಯಾಗಿದ್ದರು.

## ವರ್ಷದ ಮುಂಗಾರು ಸಾಮಾನ್ಯ

ನವದೆಹಲಿ, ಸೆ. 30 – ಕಳೆದ ಮುಂಗಾರು ಅವಧಿಯಲ್ಲಿ ಮಳೆಯ ಪ್ರಮಾಣ ಸಾಮಾನ್ಯವಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಜೂನ್‌ನಿಂದ ಸೆಪ್ಟೆಂಬರ್ ನಡುವಿನ ಅವಧಿ ಮುಂಗಾರಿನದ್ದಾಗಿದೆ.

ಅಕ್ಟೋಬರ್‌ನಿಂದ ಡಿಸೆಂಬರ್ ನಡುವಿನ ಹಿಂಗಾರು ಮಳೆಯೂ ಸಾಮಾನ್ಯವಾಗಿರಲಿದೆ ಎಂದು ಹವಾಮಾನ ಇಲಾಖೆಯ ಪ್ರಧಾನ ನಿರ್ದೇಶಕ ಮೃತ್ಯುಂಜಯ್ ಮೊಹಾಪಾತ್ರ ಹೇಳಿದ್ದಾರೆ.

ಮುಂಗಾರು ಮಾರುತಗಳು ಅಕ್ಟೋಬರ್ 6ರಿಂದ ದೇಶದ ವಾಯುವ್ಯ ಭಾಗದಿಂದ ಹಿಂದೆ ಸರಿಯಲಿವೆ ಎಂದು ಮೊಹಾಪಾತ್ರ ತಿಳಿಸಿದ್ದಾರೆ. 1960ರ ನಂತರ ಎರಡನೇ ಬಾರಿಗೆ (2ನೇ ಪುಟಕ್ಕೆ)

## ವಾಹನದ ದಾಖಲೆಗಳ ಅವಧಿ ಅ.31ರವರೆಗೆ ವಿಸ್ತರಣೆ

ನವದೆಹಲಿ, ಸೆ. 30 - ವಾಹನಗಳ ದಾಖಲೆಗಳ ಸಿಂಧುತ್ವವನ್ನು ಕೇಂದ್ರ ಸರ್ಕಾರ ಅಕ್ಟೋಬರ್ 31ರವರೆಗೆ ವಿಸ್ತರಿಸಿದೆ. ವಾಹನ ಚಾಲನಾ ಅನುಮತಿ, ನೋಂದಣಿ ಸೇರಿದಂತೆ ಎಲ್ಲ ಅನುಮತಿಗಳ ಅವಧಿಯನ್ನು ಕೊರೊನಾ ಕಾರಣದಿಂದ ವಿಸ್ತರಿಸಲಾಗಿದೆ.

ಫೆಬ್ರವರಿ 1, 2020ರವರೆಗೆ ಅವಧಿ ಮೀರಿದ ದಾಖಲೆಗಳು ಅಕ್ಟೋಬರ್ 31, 2021ರವರೆಗೆ ಸಿಂಧು ಎಂದು ಪರಿಗಣಿಸುವಂತೆ ಕೇಂದ್ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

# ಮೀಸಲಾತಿ ಬಗ್ಗೆ ಸ್ಪಷ್ಟ ಭರವಸೆ ಕೊಡಿ

### ಪಂಚಮಸಾಲಿಗರಿಗೆ 2ಎ ಮೀಸಲಾತಿ ಬಗ್ಗೆ ಸಿಎಂಗೆ ಬಸವ ಜಯಮೃತ್ಯುಂಜಯ ಶ್ರೀ ಆಗ್ರಹ






ಲಿಂಗಾಯತ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ಅಭಿಯಾನ ಹಾಗೂ ರಾಜ್ಯ ಯುವ ಘಟಕದ ಅಧ್ಯಕ್ಷರ ಪದಗ್ರಹಣ ಸಮಾರಂಭದ ಅಂಗವಾಗಿ ನಗರದಲ್ಲಿ ಕಲಾ ತಂಡಗಳೊಂದಿಗೆ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿಗಳ ಭವ್ಯ ಮೆರವಣಿಗೆ ನಡೆಯಿತು.

ದಾವಣಗೆರೆ, ಸೆ. 30 - ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕಲ್ಪಿಸುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಮಾಜಕ್ಕೆ ಸಮಾಧಾನ ತರುವ ರೀತಿಯಲ್ಲಿ ಸ್ಪಷ್ಟ ಭರವಸೆ ನೀಡಬೇಕು. ಇಲ್ಲವಾದರೆ ಮೀಸಲಾತಿಗಾಗಿ ಹೋರಾಟ ಮುಂದುವರೆಸಲಾಗುವುದು ಎಂದು ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗಡೆ ಅವರು ಮೀಸಲಾತಿ ಬಗ್ಗೆ ನೀಡಿರುವ ಹೇಳಿಕೆಯೂ ಸಮಾಧಾನ ತಂದಿದೆ. ಅಕ್ಟೋಬರ್ 1ರಂದು ಆಯೋಗದ ಎದುರು ದಾಖಲೆಗಳನ್ನು ಸಲ್ಲಿಸಲಿದ್ದೇವೆ. ಆಯೋಗ ತ್ವರಿತವಾಗಿ ವರದಿ ನೀಡಿ, ರಾಜ್ಯ ಸರ್ಕಾರ ಅಕ್ಟೋಬರ್ 13ರ ಒಳಗೆ 2ಎ ಮೀಸಲಾತಿ ಘೋಷಿಸುವ ನಿರೀಕ್ಷೆ ಇದೆ ಎಂದು ಶ್ರೀಗಳು ಹೇಳಿದ್ದಾರೆ.

ಸಮಾಜದ ಹೋರಾಟದ ಫಲವಾಗಿ ಇಪ್ಪತ್ತೈದು ವರ್ಷಗಳಿಂದ ಬಾಕಿ ಇದ್ದ ಮೀಸಲಾತಿ ವಿಷಯ ಶೇ.99ರಷ್ಟು ಮುನ್ನಡೆ ಕಂಡಿದ್ದು, ಆಯೋಗದ (3ನೇ ಪುಟಕ್ಕೆ)

### ದಾವಣಗೆರೆಯಲ್ಲಿ ಕಾರ್ಯಕೇಂದ್ರ

ನಗರದಲ್ಲಿ ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠದ ಕಾರ್ಯಕೇಂದ್ರ ಸ್ಥಾಪಿಸಲಾಗುವುದು ಎಂದು ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ತಿಳಿಸಿದ್ದಾರೆ. ಚಿಂದೋಡಿ ಲೀಲಾ ಅವರು ದಾವಣಗೆರೆಯಲ್ಲೇ ಪೀಠ ಸ್ಥಾಪಿಸಬೇಕೆಂದು (3ನೇ ಪುಟಕ್ಕೆ)

### ಇಂದು ಮೀಸಲಾತಿ ನಿರ್ಧಾರವಾಗದು

ನಾಳೆ ಶುಕ್ರವಾರ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವ ಸ್ಪಷ್ಟ ಭರವಸೆ ಸಾಧ್ಯವಾಗದೇ ಇರಬಹುದು. ಮೀಸಲಾತಿಗೆ ಕುಲಶಾಸ್ತ್ರೀಯ ಅಧ್ಯಯನ ನಡೆಸಿದ ನಂತರ ಹಿಂದುಳಿದ ವರ್ಗಗಳ ಆಯೋಗ ವರದಿ ಸಲ್ಲಿಸಬೇಕಿದೆ ಎಂದು ಶಾಸಕ ಅರವಿಂದ ಬೆಲ್ಲದ್ ಹೇಳಿದ್ದಾರೆ. ಮರಾಠ, ಅಂಬಿಗರು, ಕುರುಬರು (3ನೇ ಪುಟಕ್ಕೆ)

## ಪ್ರಾಮಾಣಿಕವಾಗಿ ದುಡಿಯುವವರನ್ನು ಗೆಲ್ಲಿಸಿ

### ಪಂಚಮಸಾಲಿ ಸಮಾಜಕ್ಕೆ ಬಸವ ಜಯಮೃತ್ಯುಂಜಯ ಶ್ರೀ ಕರೆ

ದಾವಣಗೆರೆ, ಸೆ. 30 – ಪಂಚಮಸಾಲಿ ಸಮಾಜದ ಪರವಾಗಿ ಪ್ರಾಮಾಣಿಕವಾಗಿ ದುಡಿಯುತ್ತಿರುವವರನ್ನು ಮುಂದಿನ ಚುನಾವಣೆಗಳಲ್ಲಿ ಗೆಲ್ಲಿಸಲು ಶ್ರಮಿಸುವಂತೆ ಪಂಚಮಸಾಲಿ ಸಮಾಜಕ್ಕೆ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಕರೆ ನೀಡಿದ್ದಾರೆ.



ನಗರದ ತ್ರಿಶೂಲ್ ಕಲಾ ಭವನದಲ್ಲಿ ಆಯೋಜಿಸಲಾಗಿದ್ದ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್, 2ಎ ಮೀಸಲಾತಿ ಹೋರಾಟದ ಸಭೆ ಹಾಗೂ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷರಾಗಿ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಅಧಿಕಾರ ವಹಿಸಿಕೊಳ್ಳುವ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಬೆಲ್ಲದ್ ಅವರು ಸದನದಲ್ಲಿ ದನಿ ಎತ್ತಿರುವುದು ಸಮಾಜದ ಪುಣ್ಯ. ಬಿ.ಜಿ. ಅಜಯ್ ಕುಮಾರ್ ದಾವಣಗೆರೆಯಲ್ಲಿ ಹಾಗೂ ಹೆಚ್.ಎಸ್. ಶಿವಶಂಕರ್ ಹರಿಹರ ದಲ್ಲಿ ಸಮಾಜಕ್ಕೆ ಶ್ರಮಿಸುತ್ತಿದ್ದಾರೆ. ನಮಗೆ ನೂರು ಜನ ಶಾಸಕರು ಬೇಡ, ಸಮಾಜಕ್ಕೆ ಪ್ರಾಮಾಣಿಕವಾದವರು ಗೆಲ್ಲಬೇಕಿದೆ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸಮಾಜಕ್ಕೆ ಮೀಸ ಲಾತಿ ಕೊಡುವುದಾಗಿ ಹೇಳಿ ಕೈ ಕೊಟ್ಟರು. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೀಸಲಾತಿ ಕೊಡುವ ವಿಶ್ವಾಸ ಇದೆ. ಅವರು (3ನೇ ಪುಟಕ್ಕೆ)




### ಡೊಳ್ಳು ಭಾರಿಸಿ ವಾಕಥಾನ್‌ಗೆ ಚಾಲನೆ ನೀಡಿದ ಡಿಸಿ, ಎಸ್ಪಿ

ದಾವಣಗೆರೆ, ಸೆ. 30- ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆ ವತಿಯಿಂದ ಆಜಾದಿ ಕಾ ಅಮೃತ್ ಮಹೋತ್ಸವ್ ಅಂಗವಾಗಿ ವಿವಿಧ ಇಲಾಖೆ ಗಳ ಸಹಯೋಗದಲ್ಲಿ ಗುರುವಾರ ನಗರದಲ್ಲಿ ಏರ್ಪಡಿಸಿದ್ದ ವಾಕಥಾನ್ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬಿ. ರಿಷ್ಯಂತ್ ಡೊಳ್ಳು ಭಾರಿಸುವ ಮೂಲಕ ಗುರುಭವನದ ಬಳಿ ಚಾಲನೆ ನೀಡಿದರು.

ಆಜಾದಿ ಕಾ ಅಮೃತ್ ಮಹೋತ್ಸವ್ ಅಂಗವಾಗಿ ಸೆ. 29 ರಿಂದಲೇ ಹಲವು ವೈವಿಧ್ಯ ಮಯ ಕಾರ್ಯಕ್ರಮಗಳು ಆರಂಭವಾಗಿದ್ದು, ಇದರ ಮುಂದುವರೆದ ಭಾಗವಾಗಿ, ಗುರುವಾರ ನಗರದಲ್ಲಿ ವಾಕಥಾನ್ (2ನೇ ಪುಟಕ್ಕೆ)

## ಮೆಗಾ ಲೋಕ ಅದಾಲತ್‌ನಲ್ಲಿ 2909 ಪ್ರಕರಣಗಳು ಇತ್ಯರ್ಥ

ದಾವಣಗೆರೆ, ಸೆ. 30- ಜಿಲ್ಲೆಯ ವಿವಿಧ ನ್ಯಾಯಾಲಯಗಳಲ್ಲಿ ಶುಕ್ರವಾರ ನಡೆದ ಮೆಗಾ ಲೋಕ ಅದಾಲತ್‌ನಲ್ಲಿ ಕೈಗೆತ್ತಿಕೊಂಡ 7192 ಪ್ರಕರಣಗಳ ಪೈಕಿ 2,909 ಪ್ರಕರಣಗಳನ್ನು ಇತ್ಯರ್ಥ ಪಡಿಸಿ, 7.67 ಕೋಟಿ ರೂ.ಗಳ ಪರಿಹಾರ ಕೊಡಿಸಲಾಗಿದೆ.



**7.67 ಕೋಟಿ ರೂ. ಪರಿಹಾರ**

ರಾಜೀಯಾಗಬಲ್ಲ 60 ಕ್ರಿಮಿನಲ್ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ. ಬ್ಯಾಂಕ್ ವ್ಯವಹಾರಕ್ಕೆ ಸಂಬಂಧಿಸಿದಂತೆ 8 ಪ್ರಕರಣಗಳನ್ನು ಇತ್ಯರ್ಥಪಡಿಸಿ 24.61 ಲಕ್ಷ ರೂ. ಪರಿಹಾರ ಒದಗಿಸಲಾಯಿತು. ಹಣ ವಸೂಲಾತಿ ಸಂಬಂಧ 6 ಪ್ರಕರಣ ಇತ್ಯರ್ಥಪಡಿಸಿ 93.40 ಲಕ್ಷ ರೂ. ಪರಿಹಾರ ಕೊಡಿಸಲಾಯಿತು.

ವಾಹನ ಅಪಘಾತಕ್ಕೆ ಸಂಬಂಧಿಸಿ ದಂತೆ 62 ಪ್ರಕರಣಗಳನ್ನು ರಾಜೀಯಲ್ಲಿ ಮುಗಿಸಲಾಯಿತು. ಸಂತ್ರಸ್ತರಿಗೆ 2.37 ಕೋಟಿ ರೂ. ಪರಿಹಾರ ಒದಗಿಸಲಾಯಿತು.

ಕಾರ್ಮಿಕರಿಗೆ ಪರಿಹಾರ ಕೊಡಿಸುವ ಸಂಬಂಧ 3 ಪ್ರಕರಣಗಳ ಪೈಕಿ 26.43 ಲಕ್ಷ ರೂ. ಪರಿಹಾರ ಕೊಡಿಸಲಾಯಿತು.

76 ಚೆಕ್ ಬೌನ್ಸ್ ಪ್ರಕರಣಗಳನ್ನು ರಾ ಜಿ ಯ ಲ್ಲಿ (2ನೇ ಪುಟಕ್ಕೆ)

## ನೈಸರ್ಗಿಕ ಅನಿಲದ ಬೆಲೆ ಶೇ.62ರಷ್ಟು ಹೆಚ್ಚಳ

ನವದೆಹಲಿ, ಸೆ. 30 – ಕೇಂದ್ರ ಸರ್ಕಾರ ಗುರುವಾರ ನೈಸರ್ಗಿಕ ಅನಿಲದ ಬೆಲೆಯನ್ನು ಶೇ.62ರಷ್ಟು ಹೆಚ್ಚಿಸಿದೆ. ವಿದ್ಯುತ್, ರಸಗೊಬ್ಬರ ಹಾಗೂ ಸಿ.ಎನ್.ಜಿ. ಮತ್ತು ಗೃಹ ಬಳಕೆ ಅಡುಗೆ ಅನಿಲಕ್ಕಾಗಿ ನೈಸರ್ಗಿಕ ಅನಿಲ ಬಳಸಲಾಗುತ್ತದೆ.

ಏಪ್ರಿಲ್ 2019ರ ನಂತರ ಮೊದಲ ಬಾರಿಗೆ ನೈಸರ್ಗಿಕ ಅನಿಲದ ಬೆಲೆಯನ್ನು ಹೆಚ್ಚಿಸಲಾಗಿದೆ. ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಂದ ಖರೀದಿಸುವ ಅಡುಗೆ ಅನಿಲದ ದರ ಪ್ರತಿ ಎಂಎಂಬಿಟಿಯುಗೆ 2.90 ಡಾಲರ್ ಆಗಿರಲಿದೆ. ಕಠಿಣವಾಗಿರುವ ಆಳ ಸಮುದ್ರದಿಂದ ಹೊರ ತೆಗೆಯುವ ಅನಿಲದ ದರ 3.62 ಡಾಲರ್ ಆಗಿರಲಿದೆ ಎಂದು ಕೇಂದ್ರ ತೈಲ ಸಚಿವಾಲಯ ತಿಳಿಸಿದೆ.

ಸರ್ಕಾರದ ಈ ಕ್ರಮದಿಂದ ಸಿ.ಎನ್.ಜಿ. ದರ ಶೇ.10-11ರಷ್ಟು ಹೆಚ್ಚಳವಾಗಲಿದೆ. (3ನೇ ಪುಟಕ್ಕೆ)

**8ನೇ ವರ್ಷದ ಪುಣ್ಯಸ್ಮರಣೆ**



ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರು,
ಪಾಲಿಕೆ ನೌಕರರ ಸಂಘದ ಅಧ್ಯಕ್ಷರು,
ವಾಲ್ಮೀಕಿ ಸಮಾಜದ ಹಿರಿಯ ಮುಖಂಡರಾದ

**ದಿ|| ಬಡಗಿ ಕೃಷ್ಣಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು. ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲೇ ನಡೆಯುತ್ತಿರುವ ನಿಮ್ಮ ಕುಟುಂಬ ವರ್ಗ.

ಸದಾ ನಿಮ್ಮ ಸ್ಮರಣೆಯಲ್ಲಿರುವ:

- ಶ್ರೀಮತಿ ಲೀಲಾವತಿ ಶ್ರೀ ಮಲ್ಲೇಶಪ್ಪ ಮತ್ತು ಮಕ್ಕಳು, ರೈಲ್ವೆ ಇಲಾಖೆ.
- ಶ್ರೀಮತಿ ಲಕ್ಷ್ಮೀದೇವಿ, ಮಹಾನಗರ ಪಾಲಿಕೆ ಮಾಜಿ ಸದಸ್ಯರು ಮತ್ತು ಶ್ರೀ ಬಿ.ವೀರಣ್ಣ ಮತ್ತು ಮಕ್ಕಳು ಅಧ್ಯಕ್ಷರು, ಜಿಲ್ಲಾ ನಾಯಕ ಸಮಾಜ, ಮಾಜಿ ನಗರಸಭಾಧ್ಯಕ್ಷರು.
- ಶ್ರೀಮತಿ ಶಾಂತಮ್ಮ ಮತ್ತು ಶ್ರೀ ರಂಗಸ್ವಾಮಿ ಹಾಗೂ ಮಕ್ಕಳು, ಆರೋಗ್ಯ ಇಲಾಖೆ.
- ಶ್ರೀಮತಿ ಶ್ವೇತಾ ಮತ್ತು ಶ್ರೀ ಬಿ.ಕೆ. ರಾಮಕೃಷ್ಣ ಹಾಗೂ ಮಕ್ಕಳು
- ಶ್ರೀಮತಿ ಲಾವಣ್ಯ ಮತ್ತು ಶ್ರೀ ಬಿ.ಕೆ.ರಾಘವೇಂದ್ರ ಹಾಗೂ ಮಕ್ಕಳು.
- ಶ್ರೀ ವಿನಾಯಕ ಪೈಲ್ವಾನ್, ಮಹಾನಗರ ಪಾಲಿಕೆ ಸದಸ್ಯರು.
- ಶ್ರೀಮತಿ ದೇವೀರಮ್ಮ, ಶ್ರೀಮತಿ ದುಗ್ಗಮ್ಮ ಮತ್ತು ಶ್ರೀ ಬಿ.ಹೆಚ್. ಮಂಜುನಾಥ್, ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಅಂಧ ಮಕ್ಕಳ ಶಾಲೆಯಲ್ಲಿ ಅಂಧ ಮಕ್ಕಳಿಗೆ ಹಣ್ಣು ವಿತರಣೆ

## ಪರಿಹಾರ ನೀಡದ ಕೆಎಸ್ಸಾರ್ಟಿಸಿ ಬಸ್ ಜಪ್ತಿ

ದಾವಣಗೆರೆ, ಸೆ.30- ಸಾಫ್ಟ್‌ವೇರ್ ಇಂಜಿನಿಯರ್‌ಗೆ ಡಿಕ್ಕಿ ಹೊಡೆದು ಸಾವಿಗೆ ಕಾರಣವಾಗಿ ಪರಿಹಾರ ನೀಡದ ಕೆಎಸ್‌ಆರ್‌ಟಿಸಿ ಸಂಸ್ಥೆಗೆ ಸೇರಿದ ಹಾವೇರಿ ವಿಭಾಗದ ಬಸ್ಸನ್ನು ನ್ಯಾಯಾಲಯದ ಆದೇಶದಂತೆ ನಗರದಲ್ಲಿ ಇಂದು ಅಮೀನರು ಜಪ್ತಿ ಮಾಡಿದರು.

ಹಾನಗಲ್ ತಾಲ್ಲೂಕಿನ ಮಂತಗಿ ಗ್ರಾಮದ ಸಾಫ್ಟ್‌ವೇರ್ ಇಂಜಿನಿಯರ್ ಸಂಜೀವ್ ಪಾಟೀಲ್ ಅವರು 2013ರ ನವೆಂಬರ್ 6 ರಂದು ದಾವಣಗೆರೆಯಿಂದ ಬೆಂಗಳೂರಿಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಈ ವೇಳೆ ತುಮಕೂರು ಟೋಲ್ ಬಳಿ ಬಸ್ ನಿಂತಾಗ ಶೌಚಾಲಯಕ್ಕೆ ಹೋಗಿ ವಾಪಸ್ ಬಸ್ ಹತ್ತಲು ರಸ್ತೆ ದಾಟುತ್ತಿರುವಾಗ ವೇಗವಾಗಿ ಬಂದ ಹಾವೇರಿ ಡಿಪೋದ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ಸಂಜೀವ್ ಪಾಟೀಲ್ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾದರೂ ಚಿಕಿತ್ಸೆ ಫಲಿಸದೇ ಸಾವಿಗೀಡಾಗಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾವಣಗೆರೆಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, (3ನೇ ಪುಟಕ್ಕೆ)

## ವಿಶ್ವನಾಥ ಪಾಟೀಲಗೆ 'ಶ್ರೇಷ್ಠ ಉದ್ಯಮಿ' ಜಯರುದ್ರೇಶ್‌ಗೆ 'ಶ್ರೇಷ್ಠ ವರ್ತಕ' ಪ್ರಶಸ್ತಿ



ದಾವಣಗೆರೆ, ಸೆ.30-ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯು ವ್ಯಾಪಾರ, ಉದ್ಯಮ ಕ್ಷೇತ್ರದಲ್ಲಿ ಗಣನೀಯ ವಾಗಿ ಸಲ್ಲಿಸುತ್ತಿರುವ ಸಾಧನೆಗೆ ಪ್ರತಿ ವರ್ಷ ಕೊಡಮಾಡುವ ಪ್ರಶಸ್ತಿಗಳಿಗೆ ನಗರದ ಇಬ್ಬರು ಸಾಧಕರು ಭಾಜನರಾಗಿದ್ದಾರೆ.

ಶ್ರೀ ಅನ್ನಪೂರ್ಣೇಶ್ವರಿ ಜಿನ್ನಿಂಗ್ ಅಂಡ್ ಪ್ರೆಸ್ಸಿಂಗ್ ಇಂಡಸ್ಟ್ರೀಸ್ ಮಾಲೀಕರೂ ಆದ ಹಿರಿಯ ಕೈಗಾರಿಕೋದ್ಯಮಿ ವಿಶ್ವನಾಥ ಬಿ. ಪಾಟೀಲ ಅವರಿಗೆ 'ಶ್ರೇಷ್ಠ ಉದ್ಯಮಿ' ಪ್ರಶಸ್ತಿ ಹಾಗೂ ನಂದಿ ಪೆಟ್ರೋಲ್ ಬಂಕ್ ಮಾಲೀಕರೂ ಆಗಿರುವ ಹಿರಿಯ ವರ್ತಕ ಟಿ. ಎಸ್.ಜಯರುದ್ರೇಶ್ ಅವರಿಗೆ 'ಶ್ರೇಷ್ಠ ವರ್ತಕ' ಪ್ರಶಸ್ತಿಯನ್ನು ನೀಡಲಾಗಿದೆ.

ಗದಗ ನಗರದ ಕೆ.ಹೆಚ್. ಪಾಟೀಲ ಸಭಾ ಭವನದಲ್ಲಿ ನಿನ್ನೆ ಏರ್ಪಾಡಾಗಿದ್ದ ಎರಡು ದಿನಗಳ (2ನೇ ಪುಟಕ್ಕೆ)


## ಲತಾ ಮಂಗೇಶ್ಕರ್ ಜನ್ಮದಿನಾಚರಣೆ



ದಾವಣಗೆರೆ, ಸೆ. 30- ನಗರದ ವಿರಕ್ತ ಮಠದಲ್ಲಿ ಭಾರತ ರತ್ನ ಲತಾ ಮಂಗೇಶ್ಕರ್ ಅವರ ಜನ್ಮದಿನಾಚರಣೆಯನ್ನು ಮೌಲಾನಾ ಆಜಾದ್ ಶಿಕ್ಷಣ ಮತ್ತು ಸಾಂಸ್ಕೃತಿಕ ಸಂಸ್ಥೆಯಿಂದ ಆಚರಿಸಲಾಯಿತು.

ಶ್ರೀ ಬಸವ ಪ್ರಭು ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಮೇಯರ್ ಎಸ್.ಟಿ. ವೀರೇಶ್, ಪಾಲಿಕೆಯ ಸದಸ್ಯ ಚಮನ್‌ಸಾಬ್, ಸಂಸ್ಥೆ ಅಧ್ಯಕ್ಷ ನಸೀರ್ ಅಹಮದ್, ನಗರ ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ. ಗೋಣೆಪ್ಪ ಇತರರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಲತಾ ಮಂಗೇಶ್ಕರ್ ಅವರೊಂದಿಗೆ ನಸೀರ್ ಅಹಮದ್ ಅವರು ದೂರವಾಣಿ ಮೂಲಕ ಶಾಲೆಯ ಮಕ್ಕಳನ್ನು ಮಾತನಾಡಿಸಿದರು.

## ಎಲ್. ಮಣಿಕಂಠ ರಾಷ್ಟ್ರಮಟ್ಟದ ಈಜು ಸ್ಪರ್ಧೆಗೆ ಆಯ್ಕೆ



ದಾವಣಗೆರೆ, ಸೆ.30- ದಾವಣಗೆರೆ ಸ್ವಿಮಿಂಗ್ ಅಕ್ವಾಟೆಕ್ಸ್ ಈಜುಪಟು ಮತ್ತು ಯುವಜನ ಕ್ರೀಡಾ ಇಲಾಖೆ ಈಜುಕೊಳ ಹರಿಹರ ಇಲ್ಲಿ ತರಬೇತಿ ಪಡೆಯುತ್ತಿದ್ದ ದವನ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ಎಲ್. ಮಣಿಕಂಠ ರಾಷ್ಟ್ರಮಟ್ಟದ ಈಜು ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ.

ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಕಿರಿಯ ಮತ್ತು ಹಿರಿಯರ ಈಜು ಸ್ಪರ್ಧೆಯಲ್ಲಿ ಭಾಗವಹಿಸಿ, 200 ಮೀ. ಬೆಸ್ಟ್ ಸ್ಟ್ರೋಕ್, ದ್ವಿತೀಯ ಸ್ಥಾನ ಪಡೆದು, ಅಕ್ಟೋಬರ್ ತಿಂಗಳಲ್ಲಿ ಬಸವನಗುಡಿಯ ಪಾಲಿಕೆ ಈಜುಕೊಳದಲ್ಲಿ ನಡೆಯುವ ರಾಷ್ಟ್ರಮಟ್ಟದ ಕಿರಿಯ ಮತ್ತು ಹಿರಿಯರ ಈಜು ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

## ಉಚಿತ ಮರಳು ಹಂಚಿಕೆ ಪ್ರಸ್ತಾವನೆ ಇಲ್ಲ

**(1ನೇ ಪುಟದಿಂದ)** ಆಗುತ್ತಿದೆ. ಒಂದು ಕೋಟಿ ಟನ್ ಮರಳು ಕೊರತೆ ಇದೆ. ಎಂ.ಸ್ಯಾಂಡ್ ಹೆಚ್ಚಳ ಮಾಡಿ, ಕೊರತೆ ತುಂಬಿಸುವ ಪ್ರಯತ್ನ ಮಾಡಲಾಗು ವುದು. ಹೊಸ ಮರಳು ನೀತಿಗೆ ಅನುಮೋದನೆ ದೊರೆತಿಲ್ಲ ಎಂದು ಸ್ಪಷ್ಟಪಡಿಸಿದರು.

ಮಂಡ್ಯದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆಯುತ್ತಿಲ್ಲ ಎಂದು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದ ಸಚಿವರು, ಜಿಲ್ಲಾ ಸಮಿತಿ ಪರಿಶೀಲಿಸಿದ ಬಳಿಕ ಗಣಿಗಾರಿಕೆಗೆ ವೈಜ್ಞಾನಿಕವಾಗಿ ಅನುಮತಿ ನೀಡಲಾಗುತ್ತಿದೆ ಎಂದರು.

## ಪರಿಹಾರ : ಬಸ್ ಜಪ್ತಿ

**(1ನೇ ಪುಟದಿಂದ)** 2017ರಲ್ಲಿ 2 ಕೋಟಿ 82 ಲಕ್ಷದ 42 ಸಾವಿರದ 885 ರೂ.ಗಳನ್ನು ಮೃತ ವ್ಯಕ್ತಿಗೆ ಪರಿಹಾರ ನೀಡುವಂತೆ ನ್ಯಾಯಾಲಯ ಆದೇಶ ನೀಡಿತ್ತು. ನಂತರ ಕೆಎಸ್‌ಆರ್‌ಟಿಸಿ ಪರಿಹಾರದ ಹಣ ನೀಡದಿದ್ದಾಗ ಬಸ್ ಜಪ್ತಿಗೆ ನ್ಯಾಯಾಲಯ ಆದೇಶಿಸಿತ್ತು. ಆಗ ಕೆಎಸ್‌ಆರ್‌ಟಿಸಿ ಸಂಸ್ಥೆ ಅಲ್ಪ ಪರಿಹಾರ ನೀಡಿ, ಮುಂದೆ ಪರಿಹಾರದ ಹಣ ಕೊಡುವುದಾಗಿ ಹೇಳಿ ಜಪ್ತಿ ಮಾಡಿದ್ದ ಬಸ್ ವಾಪಸ್ ಪಡೆದಿತ್ತು.

ಇದಾದ ನಂತರ ಪರಿಹಾರದ ಬಾಕಿ ಹಣ ನೀಡಿದೇ ಇದ್ದ ಕಾರಣ ಪುನಃ ನ್ಯಾಯಾಲಯವು ಸೆ.8, 2021ರಲ್ಲಿ ಹಾವೇರಿ ಡಿಪೋಗೆ ಸೇರಿದ ಆರು ಬಸ್‌ಗಳನ್ನು ಜಪ್ತಿ ಮಾಡುವಂತೆ ಆದೇಶ ನೀಡಿತ್ತು. ಅದರಂತೆ ನ್ಯಾಯಾಲಯದ ಅಮೀನರು ಇಂದು ನಗರದ ಕೆಎಸ್‌ಆರ್‌ಟಿಸಿಯ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಹಾವೇರಿ ಡಿಪೋಗೆ ಸೇರಿದ ಒಂದು ಬಸ್ಸನ್ನು ಜಪ್ತಿ ಮಾಡಿದ್ದಾರೆ.

ನ್ಯಾಯಾಲಯದ ಸಿಬ್ಬಂದಿಗಳಾದ ರಾಜಕುಮಾರ್, ಮಹೇಶ್, ಪರಮೇಶ್, ಗುರುಮೂರ್ತಿ, ಶ್ರೀಧರ್, ಮೃತ ಸಂಜೀವ್ ಪಾಟೀಲ್ ಅವರ ಪತ್ನಿ ಗೌರಿ ಎಸ್. ಪಾಟೀಲ್, ಆಕೆಯ ತಂದೆ - ವರ್ತಕ ಕಿರುವಾಡಿ ಸೋಮಶೇಖರ್ ಇದ್ದರು.

## ಆರ್.ಜಿ.ಕಾಲೇಜಿನ ವಿದ್ಯಾರ್ಥಿಯಿಂದ ರಕ್ತದಾನ



ದಾವಣಗೆರೆ, ಸೆ.30- ರೋಗಿಯ ತುರ್ತು ಪರಿಸ್ಥಿತಿಯಲ್ಲಿ ಸಿಎಸ್‌ಆರ್ ಅಡಿಯಲ್ಲಿ ರಕ್ತದಾನ ಮಾಡುವ ಮೂಲಕ ಆರ್.ಜಿ.ಕಾಲೇಜಿನ ವಿದ್ಯಾರ್ಥಿ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ಸರಿಯಾದ ಸಮಯದಲ್ಲಿ ನಿರ್ವಹಿಸಿದ್ದಾರೆ.

# ಕಾಲ, ಕಾಸು, ಕಾಯಕಕ್ಕೆ ಮಹತ್ವ ಕೊಟ್ಟಿದ್ದ ತರಳಬಾಳು ಲಿಂ. ಜಗದ್ಗುರು ಶಿವಕುಮಾರ ಶ್ರೀಗಳು



**ತಾಲ್ಲೂಕು ಕಸಾಪ ನಿಕಟಪೂರ್ವ ಅಧ್ಯಕ್ಷ ಬಿ.ವಾಮದೇವಪ್ಪ**

ದಾವಣಗೆರೆ, ಸೆ. 30-ಸಿರಿಗೆರೆಯ ತರಳಬಾಳು ಬೃಹನ್ಮಠದ 20ನೇ ಪೀಠಾಧಿಪತಿ ಲಿಂ|| ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಶ್ರೀ ಸಂಸ್ಥಾನದ ಜಗದ್ಗುರುಗಳಾಗಿ ಅತ್ಯಂತ ವಿಷಮಸ್ಥಿತಿಯಲ್ಲಿ ಸಿಂಹಾಸನಾರೋಹಣ ಮಾಡಿದ್ದರು. ಶ್ರೀ ಶಿವಕುಮಾರ ಸ್ವಾಮಿಗಳು ಶ್ರೀಮಠವು ಆರ್ಥಿಕ ದುಸ್ಥಿತಿ ಯಲ್ಲಿ, ದುಗ್ಗಾಣಿ ಮಠವೆಂದೇ ಹೆಸರು ಪಡೆದಿದ್ದ ಸಂದರ್ಭದಲ್ಲಿ ತುಂಬಾ ದೊಡ್ಡ ಸಮಾಜವನ್ನು ಸುಸ್ಥಿತಿಗೆ ತರುವ ಜವಾಬ್ದಾರಿ ಹೊಂದಿದ್ದರು. ಅನೇಕ ಕಷ್ಟ ಕಾರ್ಪಣ್ಯಗಳನ್ನು ಧೀರೋದಾತ್ತವಾಗಿ ಎದುರಿಸಿ ನಾಡು, ದೇಶ ಮೆಚ್ಚುವಂತೆ ಸಮಾಜವನ್ನು ಸುಸ್ಥಿತಿಗೆ ತಂದ ಧೀಮಂತ ಜಗದ್ಗುರುಗಳಾಗಿದ್ದರು.

ಶಿವಕುಮಾರ ಶ್ರೀಗಳವರು ಬಸವ ಜಯಂತಿಯಂದು ಜನ್ಮ ತಾಳಿದವರಾಗಿದ್ದು, ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಚಾಚೂ ತಪ್ಪದೇ ಶ್ರೀಮಠದ ವಿವಿಧ ಕಾರ್ಯಕ್ರಮಗಳ ಮೂಲಕ ಅನುಷ್ಠಾನ ಗೊಳಿಸಿದ ಪ್ರಥಮರೆನಿಸಿಕೊಂಡಿದ್ದರು.

ಪೂಜ್ಯರು ಚಾಚೂ ತಪ್ಪದೇ ಕಾಲ, ಕಾಸು, ಕಾಯಕಕ್ಕೆ ಮಹತ್ವ ಕೊಟ್ಟು, ನುಡಿದಂತೆ ನಡೆದು ತೋರಿಸಿದ ಧೀಮಂತ ಗುರುಗಳಾಗಿದ್ದರು ಎಂದು ತಾಲ್ಲೂಕು ಕಸಾಪ ನಿಕಟಪೂರ್ವ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದ್ದಾರೆ.

ಈಗಿನ ತರಳಬಾಳು ಜಗದ್ಗುರುಗಳಾದ ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಲಿಂಗೈಕ್ಯ ಶ್ರೀಗಳ ಹಾಗೂ ಬಸವೇಶ್ವರರ ತತ್ವಾದರ್ಶಗಳನ್ನು ವಿಶ್ವದ ಉದ್ದಗಲಕ್ಕೂ ತಲುಪಿಸುವಂತಹ ಮಹಾನ್ ಕಾರ್ಯಗಳನ್ನು ಮಾಡುತ್ತಿದ್ದಾರೆ ಎಂದು ವಾಮದೇವಪ್ಪ ತಮ್ಮ ಭಕ್ತಿ ಸಮರ್ಪಣಾ ನುಡಿಗಳನ್ನು ಸಲ್ಲಿಸಿದರು.

ನಗರದ ತಾಲ್ಲೂಕು ಆಫೀಸ್ ಪಕ್ಕದ ಶ್ರೀ ಬನಶಂಕರಿ ಅಂಡ್ ಕೋ. ಕಚೇರಿಯಲ್ಲಿ ಅಡಿಕೆ ವರ್ತಕರು ಮತ್ತು ಅಕ್ಕಿ ವರ್ತಕರು ಮೊನ್ನೆ ಏರ್ಪಡಿಸಿದ್ದ ಲಿಂಗೈಕ್ಯ ಜಗದ್ಗುರು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ 29ನೇ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಮತ್ತೋರ್ವ ಅತಿಥಿಯಾಗಿದ್ದ ಅಡಿಕೆ ವರ್ತಕ ಹೆಚ್.ಎಂ. ಬಸವರಾಜಪ್ಪ ಅವರು, ಲಿಂ. ಶ್ರೀಗಳವರಿಗೆ ನುಡಿ ನಮನ ಸಲ್ಲಿಸುತ್ತಾ, ಲಿಂ. ಶಿವಕುಮಾರ ಶ್ರೀಗಳನ್ನು ಪರಿಚಯಿಸುವುದೆಂದರೆ ಸೂರ್ಯ-ಚಂದ್ರರನ್ನು ಪರಿಚಯಿಸಿದಂತಾಗುತ್ತದೆ ಎಂದು ಹಲವಾರು ಪೂಜ್ಯರ ದೃಷ್ಟಾಂತಗಳೊಂದಿಗೆ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಪಿಎಂಸಿ ಮಾಜಿ ಅಧ್ಯಕ್ಷರೂ ಆದ ಹಾಲಿ ಸದಸ್ಯ ಮುದೇಗೌಡ್ರ ಗಿರೀಶ್ ಮಾತನಾಡಿ, ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಸಾರ್ಥಕ ಸೇವೆಯನ್ನು ಹೇಳಿದರು.

ಅಡಿಕೆ ವರ್ತಕರೂ ಆಗಿರುವ ಎಲೆಬೇತೂರಿನ ನಂದಿ ಬಸವರಾಜಪ್ಪ ಮತ್ತು ಚಿಕ್ಕನಹಳ್ಳಿ ಪಿ.ಬಿ.ಪರಮೇಶ್ವರಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೊಗ್ಗಳ್ಳಿ ಶಿವಕುಮಾರ್, ಕುಕ್ಕುವಾಡ ಸುರೇಂದ್ರಪ್ಪ, ಬಿ.ಕೆ.ಬಿ. ಸೋಮಣ್ಣ, ಬನಶಂಕರಿ ಶಂಕ್ರಣ್ಣ, ಪಾಂಡೋಮಟ್ಟಿ ರವಿ, ಗಡಿಗುಡಾಳ್ ಮಂಜುನಾಥ್, ಕಂಸಾಗರದ ಪಂಚಾಕ್ಷರಪ್ಪ, ಕಿರುವಾಡಿ ಸೋಮಣ್ಣ, ಮಳಲ್ಕೆರೆ ಮಹೇಶ್ವರಯ್ಯ, ಆರ್.ಜೆ. ರುದ್ರೇಶ್, ದೊಗ್ಗಳ್ಳಿ ಬಸವರಾಜ್, ಕರೆಶಿವಪ್ಪರ ಸಿದ್ದೇಶ್, ಈಚಘಟ್ಟ ಶಿವಕುಮಾರ್, ಬಿ.ಜಿ.ಆರ್. ಹಾಲೇಶ್, ದೊಗ್ಗಳ್ಳಿ ಮಲ್ಲಿಕಾರ್ಜುನ್, ಬುಳ್ಳಾಪುರ ಮಲ್ಲಿಕಾರ್ಜುನ ಸ್ವಾಮಿ, ಕಬ್ಬೂರು ಸುರೇಶ್, ಕೆ.ಎಸ್. ಬಸವರಾಜ್ ವಕೀಲರು, ಬೊಮ್ಮೇನಹಳ್ಳಿ ಲಿಂಗರಾಜು, ಬುಳ್ಳಾಪುರ ಸಿದ್ದೇಶ್, ಆವರಗೆರೆ ಜಯಣ್ಣ, ಬಾವಿಹಾಳ್ ಶಿವಕುಮಾರ್, ಬಾತಿ ಶಿವಕುಮಾರ್, ಆನೆಕೊಂಡದ ಜಿ.ಎಸ್. ಸಿದ್ದೇಶ್, ದೀಪಾ ರಾಜಣ್ಣ, ಗಾಂಧಿನಗರ ವೃಷಭೇಂದ್ರಪ್ಪ, ಬಿ.ಎಂ.ಟಿ. ಅಶೋಕ್, ಅಣಬೇರು ವಿನಯ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಎಲೆಬೇತೂರು ಎಂ. ಷಡಾಕ್ಷರಪ್ಪ ಪ್ರಾರ್ಥಿಸಿದರು. ವಿಠಲಾಪುರ ಕಿರಣ್ ಸ್ವಾಗತಿಸಿದರು. ಬನಶಂಕರಿ ಸದಣ್ಣ ಕಾರ್ಯಕ್ರಮ ನಿರೂಪಿಸಿದರು. ರಾಮನಗೊಂಡನಹಳ್ಳಿ ಜಯಣ್ಣ ವಂದಿಸಿದರು.

## ನಾಳೆ ಅಂದನೂರು ಬಳಗದ ಸಭೆ

ದಾವಣಗೆರೆ, ಸೆ.30- ನಗರದ ಅಂದನೂರು ಬಳಗದ 11ನೇ ವಾರ್ಷಿಕ ಮಹಾಸಭೆಯು ನಾಡಿದ್ದು ದಿನಾಂಕ 2 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಬಳಗದ ಅಧ್ಯಕ್ಷ ಅಂದನೂರು ಬಸೆಟಪ್ಪ (ಬಾಬಣ್ಣ) ಅವರ ಅಧ್ಯಕ್ಷತೆಯಲ್ಲಿ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಕರೆಯಲಾಗಿದೆ ಎಂದು ಬಳಗದ ಕಾರ್ಯದರ್ಶಿ ಅಂದನೂರು ರಾಜೇಶ್, ಖಜಾಂಚಿ ಅಂದನೂರು ಮುರುಗೇಶಪ್ಪ ತಿಳಿಸಿದ್ದಾರೆ.

# ಮೀಸಲಾತಿ ಬಗ್ಗೆ ಸ್ಪಷ್ಟ ಭರವಸೆ ಕೊಡಿ

**(1ನೇ ಪುಟದಿಂದ)** ವರದಿ ಸಲ್ಲಿಕೆಯ ನಂತರ ಸಂಪುಟದಲ್ಲಿ ಅನುಮತಿ ಪಡೆಯುವ ಶೇ.1ರಷ್ಟು ಕೆಲಸ ಮಾತ್ರ ಬಾಕಿ ಇದೆ. ಆ ಬಗ್ಗೆಯೂ ಮುಖ್ಯಮಂತ್ರಿ ಕ್ರಮ ತೆಗೆದುಕೊಳ್ಳ ಬೇಕು. ಅ.1ರಂದು ಬೆಂಗಳೂರಿನಲ್ಲಿ ಮೀಸಲಾತಿಗೆ ಒತ್ತಾ ಯಿಸಿ ಬೃಹತ್ ಸಭೆ ನಡೆಯಲಿದೆ. ಸಭೆಗೆ ಮುಂಚೆಯೇ ಸ್ಪಷ್ಟ ಭರವಸೆ ನೀಡಬೇಕು ಎಂದವರು ಆಗ್ರಹಿಸಿದ್ದಾರೆ.

ಒಂದು ವೇಳೆ ಸರ್ಕಾರ ಸ್ಪಷ್ಟ ಭರವಸೆ ನೀಡದೇ ಹೋದರೆ, ಸ್ವತಂತ್ರ ಉದ್ಯಾನವನದಲ್ಲಿ ಧರಣಿ ನಡೆಸು ವುದೂ ಸೇರಿದಂತೆ ಹೋರಾಟದ ಮುಂದಿನ ಹೆಜ್ಜೆಗಳನ್ನು ಇಡಲಾಗುವುದು ಎಂದ ಶ್ರೀಗಳು, ಪಂಚಮಸಾಲಿ ಸಮಾಜ ಈಗ ಮೀಸಲಾತಿ ಎಂಬ ಬಸ್ ನಿಲ್ದಾಣಕ್ಕೆ ಬಂದಿದೆ. ಈ ಬಾರಿ ಮೀಸಲಾತಿಯ ಬಸ್ ಏರುವ ಸಂಪೂರ್ಣ ಭರವಸೆ ಇದೆ ಎಂದು ಶ್ರೀಗಳು ಹೇಳಿದ್ದಾರೆ.

ಅ.1ರ ಶುಕ್ರವಾರದಂದು ಬೆಂಗಳೂರಿನಲ್ಲಿ ಮಾಜಿ ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಅವರ ಜನ್ಮ ದಿನವನ್ನು ಆಚರಿಸಲಾಗುವುದು ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಲಿಂಗಾಯತ ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆರು ತಿಂಗಳಲ್ಲಿ ಮೀಸಲಾತಿ ಕಲ್ಪಿಸುವುದಾಗಿ ನೀಡಿದ ಭರವಸೆಯಂತೆ ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ನಮ್ಮ ಸಮಾಜದ ಮಕ್ಕಳಿಗೆ 2ಎ ಮೀಸಲಾತಿ ಪತ್ರ ಸಿಗುವವರೆಗೂ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು.

ಮೀಸಲಾತಿ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಶಿವಶಂಕರ್ ಮಾತನಾಡಿ, ನೊಳಂಬ ಸಮಾಜದ ಅಧ್ಯಕ್ಷ ಎಂ.ಎಸ್. ಪಾಟೀಲ್ ಅವರು ಇತ್ತೀಚೆಗೆ 2ಎ ಮೀಸಲಾತಿಗೆ ಒತ್ತಾಯಿಸಿದ್ದಾರೆ. ಇದು ಪಂಚಮಸಾಲಿ ಹೋರಾಟದಿಂದ ಲಿಂಗಾಯತದ ಎಲ್ಲ ಒಳ ಸಮುದಾಯಗಳ ಕಣ್ತೆರೆಸಿರುವುದನ್ನು ತೋರಿಸುತ್ತಿದೆ ಎಂದರು.

ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶೆಂಪೂರ್, ಸಮಾಜದ ಮುಖಂಡರಾದ ತ್ರಿಶೂಲ್ ಪಾಣಿ ಪಟೇಲ್, ಹೆಚ್.ಎಸ್. ಅರವಿಂದ, ಹೇಮಂತ್ ಕುಮಾರ್ ಪಾಟೀಲ್, ದೀಟೂರು ಮಲ್ಲಪ್ಪ, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಪರಮೇಶ್ವರ ಗೌಡ್ರು, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಎಸ್. ಓಂಕಾರಪ್ಪ, ಗೋಕಾಕ್ ನಿಂಗಪ್ಪ ತಿರೋಜಿ, ಅಶೋಕ್ ಗೋಪನಾಳ್, ಮಹಾಂತೇಶ್, ಶಂಭುಲಿಂಗನ ಗೌಡ ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

## ದುಡಿಯುವವರ ಗೆಲ್ಲಿಸಿ

**(1ನೇ ಪುಟದಿಂದ)** ಮೀಸಲಾತಿ ಕಲ್ಪಿಸಿದರೆ, ಡೈಮಂಡ್ ಕಲ್ಲುಸಕ್ಕರೆಯಲ್ಲಿ ತುಲಾಭಾರ ಮಾಡುತ್ತೇವೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯ ಸಂದರ್ಭದಲ್ಲಿ ಅವರ ಚಿತ್ರವನ್ನೂ ಇಟ್ಟು ಗೌರವಿಸುತ್ತೇವೆ ಎಂದು ಶ್ರೀಗಳು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಅರವಿಂದ ಬೆಲ್ಲದ್, ಪಂಚಮಸಾಲಿ ಸಮಾಜದಲ್ಲಿ ರೈತರೇ ಹೆಚ್ಚಾಗಿದ್ದು ಅತಿವೃಷ್ಟಿ - ಅನಾವೃಷ್ಟಿಯಿಂದ ಬಳಲುತ್ತಿದ್ದಾರೆ. ಹೀಗಾಗಿ ಸಮಾಜಕ್ಕೆ ಮೀಸಲಾತಿ ಬೇಕಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಅವರು ಪಂಚಮಸಾಲಿ ಸಮಾಜದ ಯುವ ಘಟಕದ ರಾಷ್ಟ್ರಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಪಂಚ ಲಾಂಛನಗಳನ್ನು ನೀಡಿ ಅವರಿಗೆ ಅಧ್ಯಕ್ಷ ಸ್ಥಾನ ವಹಿಸಿಕೊಡಲಾಯಿತು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ನಂದಿಗುಡಿಯ ನೊಳಂಬ ಪೀಠದ ಜಗದ್ಗುರು ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ, ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶೆಪ್ಪನವರ್, ಸಮಾಜದ ಮುಖಂಡರಾದ ಮಂಜುನಾಥ ಕುನ್ನೂರು, ಸೋಮಣ್ಣ ಬೇವಿನಮರದ್, ನಂದಿಹಳ್ಳಿ ಹಾಲಪ್ಪ, ಮಲ್ಲೇಶ್, ಪುಟ್ಟಸ್ವಾಮಿ, ವೀಣ ಕಾಶೆಪ್ಪನವರ್, ಡಾ. ನಾಗರಾಜ್ ಹುಲಿ, ರುದ್ರಗೌಡ್ರು, ಕೇಬಲ್ ಮಹೇಶ್, ಚಿದಾನಂದಪ್ಪ ಬೆನಕನಕೊಂಡಿ, ಸುಭಾಷ್ಚಂದ್ರ ಮತ್ತಿತರರು ಉಪಸ್ಥಿತರಿದ್ದರು.

## ದಾವಣಗೆರೆಯಲ್ಲಿ ಕಾರ್ಯಕೇಂದ್ರ

**(1ನೇ ಪುಟದಿಂದ) ಒಂದು ಎಕರೆ ಜಮೀನು ನೀಡಿದ್ದರು. ಆದರೆ, ಕೂಡಲಸಂಗಮದಲ್ಲಿ ಪೀಠ ಸ್ಥಾಪಿಸಲು ನಂತರದಲ್ಲಿ ನಿರ್ಧರಿಸಲಾಗಿತ್ತು. ದಾವಣಗೆರೆಯಲ್ಲಿ ನೀಡಲಾದ ಜಾಗದಲ್ಲಿ ಕಾರ್ಯಕೇಂದ್ರ ನಿರ್ಮಿಸಲು ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಶ್ರೀಗಳು ಹೇಳಿದ್ದಾರೆ. ಇದಕ್ಕೂ ಮುಂಚೆ ಮಾತನಾಡಿದ್ದ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ನಗರದಲ್ಲಿ ಧರ್ಮಸಂಸ್ಕಾರ ಹಾಗೂ ಸಮಾಜದ ಒಳಿತಿಗೆ ಪೀಠದ ಕಾರ್ಯಕೇಂದ್ರ ಮಾಡುವಂತೆ ಮನವಿ ಮಾಡಿಕೊಂಡಿದ್ದರು.**

## ಮೀಸಲಾತಿ ನಿರ್ಧಾರವಾಗದು

**(1ನೇ ಪುಟದಿಂದ) ಹಾಗೂ ವಾಲ್ಮೀಕಿ ಸೇರಿದಂತೆ ಹಲವಾರು ಸಮಾಜಗಳ ಮೀಸಲಾತಿ ಬೇಡಿಕಗಳಿವೆ. ಇವೆಲ್ಲವನ್ನೂ ಪರಿಶೀಲಿಸಿ ಆಯೋಗ ವರದಿ ಸಲ್ಲಿಸಬೇಕಿದೆ ಎಂದವರು ತಿಳಿಸಿದ್ದಾರೆ.**

**ಶೇ.50ರ ಮಿತಿ ಮೀರದಂತೆ ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಕಲ್ಪಿಸುವುದಕ್ಕೆ ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದೇವೆ. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಸಂಬಂಧಿಸಿದವರ ಜೊತೆ ಚರ್ಚಿಸಲಾಗಿದ್ದು, ಮೀಸಲಾತಿ ದೊರೆಯುವ ಭರವಸೆ ಇದೆ ಎಂದಿದ್ದಾರೆ.**

## ಅವರಿಗೆ ಎ.ಸಿ.ಯಲ್ಲಿ ವಿಶ್ರಾಂತಿ ನಾವು ಬೀದಿಯ ಬಿಸಿಲಿನಲ್ಲಿ...

ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರು ಮೀಸಲಾತಿ ಹೋರಾಟದಲ್ಲಿ ಪಾಲ್ಗೊಳ್ಳುವ ಕುರಿತ ಪ್ರಶ್ನೆಗೆ ಉತ್ತರಿಸಿರುವ ವಿಜಯಾನಂದ ಕಾಶಪ್ಪನವರ್, ಅವರು ಎ.ಸಿ.ಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ನಾವು ಬೀದಿಯ ಬಿಸಿಲಿನಲ್ಲಿ ತಿರುಗಾಡಿ ಹೋರಾಟ ನಡೆಸುತ್ತಿದ್ದೇವೆ ಎಂದರು.

ವಚನಾನಂದ ಶ್ರೀಗಳು ಹೋರಾಟಕ್ಕೆ ಬಂದರೆ ಸ್ವಾಗತಿಸುತ್ತೇವೆ, ಹೋದಾಗ ಬೀಳ್ಕೊಡುತ್ತೇವೆ. ಅವರು ಈ ಹಿಂದೆ ನಡೆದ ಪಾದಯಾತ್ರೆಯ ಹೋರಾಟದ ನಂತರ ವಿಶ್ರಾಂತಿ ಪಡೆಯುತ್ತಿದ್ದಾರೆ ಎಂದೂ ಅವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಹೋರಾಟಗಳು ಬೇರೆ ಬೇರೆ ಮಗ್ಗಲುಗಳಲ್ಲಿ ನಡೆಯುತ್ತವೆ. ಕೆಲವರು ಬೀದಿಯಲ್ಲಿ ಹೋರಾಟ ನಡೆಸಿದರೆ, ಕೆಲವರು ಮನೆಯಲ್ಲಿ, ಇನ್ನು ಕೆಲವರು ಎ.ಸಿ. ಕೋಣೆಯಲ್ಲಿ ಹೋರಾಟ ನಡೆಸುತ್ತಾರೆ. ಎಲ್ಲರೂ ಮೀಸಲಾತಿಗೆ ಪ್ರಯತ್ನ ಪಡಲಿ ಎಂದರು.

## ಮೀಸಲಾತಿಗೆ ಲಿಂಗಾಯತ ಬಿಡುವುದು ಬೇಡ

**ಲಿಂಗಾಯತ ಸೋದರ ಸಮಾಜ 36 ಒಳಪಂಗಡವದರು ಮೀಸಲಾತಿ ಪಡೆದಿದ್ದಾರೆ. ಹಿಂದೂ ಗಾಣಿಗ, ಹಿಂದೂ ಹಡಪದ ಎಂದು ಬರೆಸಿದಾಗ ಮೀಸಲಾತಿ ಪಡೆಯುತ್ತಿದ್ದಾರೆ. ಆದರೂ, ಅವರು ಲಿಂಗಾಯತ ಸೋದರ ಸಮಾಜದವರು ಎಂದು ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ. ಮೀಸಲಾತಿಗಾಗಿ ಲಿಂಗಾಯತ ಸಂಸ್ಕಾರ, ಸಂಸ್ಕೃತಿ, ಸಮಾಜ ಬಿಟ್ಟು ಹೋಗಬಾರದು. ರಾಜ್ಯ ಸರ್ಕಾರ ಲಿಂಗಾಯತ ಒಳಪಂಗಡಗಳಿಗೆ ಸೇರಿದ ಎಲ್ಲರಿಗೂ 2ಎ ಮೀಸಲಾತಿ ಕಲ್ಪಿಸಬೇಕು ಎಂದು ಶ್ರೀಗಳು ಒತ್ತಾಯಿಸಿದರು.**

# ಪೊಲೀಸರೆಂದರೆ ತೊಂದರೆ ನಿವಾರಿಸುವ ಹಿತೈಷಿಗಳು



**ಡಿವೈಎಸ್‌ಪಿ ಭೂತೇಗೌಡ**

ಮಲೇಬೆನ್ನೂರು, ಸೆ.30- ಪೊಲೀಸರೆಂದರೆ ತೊಂದರೆ ನಿವಾರಿಸುವ ಹಿತೈಷಿಗಳು ಎಂದು ಪ್ರೊಬೇಷನರಿ ಡಿವೈಎಸ್‌ಪಿ ಭೂತೇಗೌಡ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಪಿಯು ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಈ ಸಾಲಿನ ವಿದ್ಯಾರ್ಥಿ ಪೊಲೀಸ್ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪೊಲೀಸರೆಂದರೆ ಭಯ ಬೇಡ, ವಿದ್ಯಾರ್ಥಿಗಳು ಹಾಗೂ ನಾಗರಿಕರಿಗೆ ಹಿತ ಬಯಸುವ ಸ್ನೇಹಜೀವಿಗಳು ಎಂದರು. ಕೊಠಡಿ ಹೊರಗೆ ಮನಸ್ಸು ಮತ್ತು ದೇಹದ ಶಿಸ್ತು, ಒಳಗೆ ಗುರಿ ತಲುಪಲು ಮಾರ್ಗ ತೋರಿಸುವ, ಸಮಯ ಪಾಲನೆ ಕಲಿಕೆಯ ತರಗತಿ ನಡೆಯುತ್ತದೆ. ಜತೆಗೆ ಸಸಿ ನೆಡುವಿಕೆ, ಸಂಚಾರ ಸುರಕ್ಷತೆ, ಮಕ್ಕಳ ಹಕ್ಕುಗಳ ಬಗ್ಗೆ ತಿಳಸಲಾಗುವುದೆಂದು ಅವರು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಉಪಪ್ರಾಚಾರ್ಯ ಎಚ್. ಹನುಮಂತಪ್ಪ ಮಾತನಾಡಿ, ಮಕ್ಕಳಲ್ಲಿ ರಾಷ್ಟ್ರಭಕ್ತಿ ಮೂಡಲು, ಶಿಸ್ತುಬದ್ಧ ಜೀವನ ನಡೆಸಲು ಪೊಲೀಸ್ ತರಬೇತಿ ಸಹಕಾರಿಯಾಗುತ್ತದೆ ಎಂದರು.

ದೈಹಿಕ ಶಿಕ್ಷಕ ಹಾಲಪ್ಪ, ಎಸ್‌ಡಿಎಂಸಿ ಸದಸ್ಯ ಎಚ್.ಎಂ. ಸದಾನಂದ ಮಾತನಾಡಿದರು. ಮಾರ್ಗ ದರ್ಶಕ ಲೋಕೇಶ್, ಹಿರಿಯ ಶಿಕ್ಷಕರಾದ ಸುರೇಶ್ ಮೂಲಿಮನಿ, ಆಯಿಷಾ, ಆಸ್ಮಾಬಾನು ಮಾತನಾಡಿದರು. ಬೋಧಕ ವರ್ಗ, ವಿದ್ಯಾರ್ಥಿಗಳು ಹಾಜರಿದ್ದರು. ಸಂಜನಾ ಪ್ರಾರ್ಥಿಸಿದರು.

# ದೇವರ ಜಮೀನುಗಳು ದೇವರ ಹೆಸರಿನಲ್ಲೇ ಉಳಿಯಲಿ: ಭೂ ಕಬಳಿಕೆ ವಿರೋಧಿ ಹೋರಾಟ ಸಮಿತಿ ಒತ್ತಾಯ


ದಾವಣಗೆರೆ, ಸೆ.30- ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ದೇವರ ಜಮೀನುಗಳನ್ನು ದೇವರ ಹೆಸರಿನಲ್ಲಿಯೇ ಉಳಿಸುವಂತೆ ಭೂ ಕಬಳಿಕೆ ವಿರೋಧಿ ಹೋರಾಟ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ದೇಶದ ದೇವಸ್ಥಾನಗಳ ಹೆಸರಿನ ಜಮೀನುಗಳನ್ನು ಈಗಾಗಲೇ ಪೂಜಾರಿಗಳು ಮತ್ತು ಟ್ರಸ್ಟಿನವರು ಕಬಳಿಸುತ್ತಿರುವುದು ಗಮನಕ್ಕೆ ಬಂದ ಪ್ರಯುಕ್ತ ಸೆ.6, 2020ರಂದು ದೇವರ ಜಮೀನಿಗೆ ದೇವರೇ ಒಡೆಯನೆಂದು ಹಾಗೂ ಪೂಜಾರಿ ಅಥವಾ ಟ್ರಸ್ಟಿನವರಾಗಲೀ ಒಡೆಯರಾಗಿರುವುದಿಲ್ಲ ಎಂದು ನ್ಯಾಯಾಲಯ ಆದೇಶಿಸಿದೆ.

ಕರ್ನಾಟಕ ರಾಜ್ಯ ಮತ್ತು ದಾವಣಗೆರೆ ಜಿಲ್ಲೆ ಹಾಗೂ ಇತರೆ ಜಿಲ್ಲೆಗಳ ದೇವಸ್ಥಾನದ ಆಸ್ತಿಗಳನ್ನು ಉಳಿಸುವ ಸಲುವಾಗಿ ಸಾರ್ವಜನಿಕರು ನ್ಯಾಯಾಲಯದಲ್ಲಿ ಸಾಕಷ್ಟು ದಾವೆಗಳನ್ನು ಹೂಡಿಕೊಂಡಿದ್ದು, ಕಂದಾಯ ಇಲಾಖೆಗೆ ಅಲೆದಾಡುವಂತಾಗಿದೆ. ದೇವರ ಹೆಸರಿಗೆ ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ರಾಜ್ಯ ಸಮಿತಿ ಸಂಚಾಲಕ ಬಲ್ಲೂರು ರವಿಕುಮಾರ್ ತಿಳಿಸಿದ್ದಾರೆ.

ದೇವಸ್ಥಾನಗಳ ಪರವಾಗಿ ಆಸ್ತಿಯನ್ನು ಉಳಿಸಲು ಸಾರ್ವಜನಿಕರು ಹೋರಾಟ ಮಾಡುತ್ತಿದ್ದರೆ, ಕೂಡಲೇ ಒಂದು ಕಡೆ ಸೇರಿ ಚರ್ಚಿಸಿ, ಕಂದಾಯ ಇಲಾಖೆ ಮತ್ತು ಇತರೆ ಇಲಾಖೆಗಳಲ್ಲಿ ಹೋರಾಟದ ಮುಖಾಂತರ ದೇವರ ಹೆಸರಿಗೆ ಆಸ್ತಿ ಉಳಿಸುವುದು ಒಳ್ಳೆಯ ಬೆಳವಣಿಗೆ ಎಂದಿದ್ದಾರೆ.

## ಮಾಧವರಾವ್‌ಗೆ 'ದಿ ಹಿಂದೂ' ಅಭಿನಂದನಾ ಪತ್ರ




ಹರಪನಹಳ್ಳಿ, ಸೆ.30- ಪಟ್ಟಣದ ಹಿರಿಯ ವರದಿಗಾರರು ಹಾಗೂ ವಿತರಕರಾದ ಬಿ. ಮಾಧವರಾವ್ ಅವರಿಗೆ ರಾಷ್ಟ್ರ ಮಟ್ಟದ 'ದಿ ಹಿಂದೂ' ಆಂಗ್ಲ ದಿನಪತ್ರಿಕೆಯು ಅಭಿನಂದನಾ ಪ್ರಮಾಣ ಪತ್ರ ನೀಡಿ ಗೌರವಿಸಿದೆ. ಮಾಧವರಾವ್ ಅವರು ಕೋವಿಡ್ 19 ಸಮಯದಲ್ಲಿ 'ದಿ ಹಿಂದೂ' ಆಂಗ್ಲ ಪತ್ರಿಕೆಯನ್ನು ಓದುಗರಿಗೆ ಸಮಯಕ್ಕೆ ಸರಿಯಾಗಿ ವಿತರಿಸಿದ ಕಾರಣ ಅವರಿಗೆ ಪತ್ರಿಕೆಯ ಹುಬ್ಬಳ್ಳಿ ಆವೃತ್ತಿಯ ತಂಡವು ಅಭಿನಂದನಾ ಪತ್ರ ನೀಡಿದೆ.

## ನಗರದಲ್ಲಿ ಇಂದು ಸಹಕಾರ ಕುಕ್ಕುಟ ಮಹಾ ಮಂಡಳದ ಸಭೆ

ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳದಿಂದ ಇಂದು ಬೆಳಿಗ್ಗೆ 11.30 ಕ್ಕೆ ಅಪೂರ್ವ ರೆಸಾರ್ಟ್‌ನಲ್ಲಿ ಕೋಳಿ ಸಾಕಾಣಿಕೆ ರೈತರ ಕುಂದು ಕೊರತೆ ಸಭೆ ಆಯೋಜಿಸಲಾಗಿದೆ ಎಂದು ಮಂಡಳದ ನಿರ್ದೇಶಕ ಮಲ್ಲಾಪುರ ದೇವರಾಜ್ ತಿಳಿಸಿದ್ದಾರೆ.

## ರೈತನ ಮೇಲೆ ಕರಡಿ ದಾಳಿ



ದಾವಣಗೆರೆ, ಸೆ.30- ಮೆಕ್ಕೆಜೋಳದ ಹೊಲದಲ್ಲಿ ಕಾಡು ಹಂದಿಗಳ ಹಾವಳಿ ತಡೆಯುವ ಸಲುವಾಗಿ ಬೆಳೆ ಕಾವಲು ಕಾಯುತ್ತಿದ್ದಾಗ ಮರಿ ಕರಡಿ ದಾಳಿ ನಡೆಸಿದ ಪರಿಣಾಮ ರೈತನೋರ್ವ ಗಾಯಗೊಂಡ ಘಟನೆ ಚನ್ನಗಿರಿ ತಾಲ್ಲೂಕು ಜೋಳದಾಳ್ ಗ್ರಾಮದಲ್ಲಿ ನಿನ್ನೆ ರಾತ್ರಿ ನಡೆದಿದೆ. ಹೊಲದ ಮಾಲೀಕ ಮಲ್ಲಪ್ಪನ ಮೇಲೆ ಮರಿ ಕರಡಿ ದಾಳಿ ನಡೆಸಿ, ಭುಜ ಹಾಗೂ ಕೈಗಳಿಗೆ ಗಾಯಗೊಳಿಸಿದೆ. ಗಾಯಾಳುವನ್ನು ಚನ್ನಗಿರಿಯ ಸರ್ಕಾರಿ ಆಸ್ಪತ್ರೆ ದಾಖಲು ಮಾಡಲಾಗಿದೆ.

## ಶವ ಪಡೆದು ಮರಣೋತ್ತರ ಪರೀಕ್ಷೆ

ಹೊನ್ನಾಳಿ, ಸೆ.30 - ನಿನ್ನೆ ರಸ್ತೆ ಅಪಘಾತದಿಂದ ಆಘಾತಕ್ಕೊಳಗಾಗಿ ಸಾವಿಗೀಡಾಗಿದ್ದ ಕುಂಬಾರ ಚನ್ನೇಶ್ ಶವವನ್ನು ಕುಟುಂಬಸ್ಥರಿಂದ ತಡರಾತ್ರಿ ವಶಕ್ಕೆ ಪಡೆದ ಪೊಲೀಸರು, ಮರಣೋತ್ತರ ಪರೀಕ್ಷೆ ನಡೆಸಿದರು. ಇಂದು ಮಧ್ಯಾಹ್ನ ಮೃತ ಶರೀರವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದರು.

ನಂತರ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು.

ಬೈಕ್‌ನಲ್ಲಿ ನಾಪತ್ತೆಯಾಗಿದ್ದ ಚಾಲಕರ ಸುಳಿವು ದೊರೆತಿಲ್ಲ. ಗಾಯಗೊಂಡ ಹಿಂಬದಿಯ ಸವಾರರು ಕುಂಸಿ ಗ್ರಾಮದವರೆಂದು ತಿಳಿದಿದ್ದು, ಒಬ್ಬ ಶಿವಮೊಗ್ಗದಲ್ಲಿ, ಮತ್ತೊಬ್ಬ ಗಾಯಾಳು ಮಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿರುವುದಾಗಿ ತಿಳಿದುಬಂದಿದೆ.

## ಕಾರಿಗನೂರಿನಲ್ಲಿ ಇಂದು ಜೆ.ಹೆಚ್. ಪಟೇಲ್ ಹುಟ್ಟುಹಬ್ಬ

ಮಾಜಿ ಮುಖ್ಯಮಂತ್ರಿ ದಿ. ಜೆ.ಹೆಚ್. ಪಟೇಲ್ ಅವರ ಹುಟ್ಟುಹಬ್ಬದ ಅಂಗವಾಗಿ ಇಂದು ಚನ್ನಗಿರಿ ತಾಲ್ಲೂಕಿನ ಕಾರಿಗನೂರು ಗ್ರಾಮದಲ್ಲಿ ಬೆಳಿಗ್ಗೆ 8 ರಿಂದ ರಾತ್ರಿ 8 ರವರೆಗೆ ಎಲ್ಲಾ ಧರ್ಮದವರೊಂದಿಗೆ ಸೌಹಾರ್ದ ಸಂಭ್ರಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತೇಜಸ್ವಿ ಪಟೇಲ್ ತಿಳಿದ್ದಾರೆ.

ವಿವಿಧ ಕಲಾ ತಂಡಗಳಿಂದ ಮೆರವಣಿಗೆ ನಡೆಯಲಿದ್ದು, ಸಂಜೆ 4 ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿಜಯ ಮಹಾಂತೇಶ್ ದಾನಮ್ಮನವರ್, ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಭಾಗವಹಿಸಲಿದ್ದಾರೆ. ಸಂಜೆ ಜಾನಪದ, ತತ್ವಪದಗಳು, ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ ಎಂದವರು ತಿಳಿಸಿದ್ದಾರೆ.

## ಅನಿಲದ ಬೆಲೆ ಶೇ.62 ಹೆಚ್ಚಳ

**(1ನೇ ಪುಟದಿಂದ)** ದೆಹಲಿ ಹಾಗೂ ಮುಂಬೈನಂತಹ ನಗರಗ ಳಲ್ಲಿ ಕೊಳವೆ ಮಾರ್ಗಗಳಿಂದ ಅನಿಲ ಪೂರೈಸುತ್ತಿರುವ ಕಡೆಗಳ ಲ್ಲೂ ಬೆಲೆ ಹೆಚ್ಚಳವಾಗಲಿದೆ.

ವಿದ್ಯುತ್ ಉತ್ಪಾದನೆಯ ವೆಚ್ಚವೂ ಹೆಚ್ಚಾಗಲಿದೆ. ಆದರೆ, ಅನಿಲದಿಂದ ಪಡೆಯುವ ವಿದ್ಯುತ್‌ಪ್ರಮಾಣ ಕಡಿಮೆ ಇರುವುದರಿಂದ ಗ್ರಾಹಕರಿಗೆ ಹೆಚ್ಚೇನೂ ಹೊರೆಯಾಗುವುದಿಲ್ಲ.

## ಶಿವಸಿಂಪಿ ಸಮಾಜದಿಂದ ದೇವರಮನೆ ಶಿವಕುಮಾರ್‌ಗೆ ಸನ್ಮಾನ



ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿರುವ ದೇವರಮನೆ ಶಿವಕುಮಾರ್ ಅವರನ್ನು ಶಿವಸಿಂಪಿ ಸಮಾಜದಿಂದ ಗುರುವಾರ ಸನ್ಮಾನಿಸಲಾಯಿತು. ಕರ್ನಾಟಕ ರಾಜ್ಯ ಶಿವಸಿಂಪಿ ಸಮಾಜದ ರಾಜ್ಯಾಧ್ಯಕ್ಷರಾದ ಚಿಗಟೇರಿ ಜಯಪ್ರಕಾಶ್ ಅವರು ಶಿವಕುಮಾರ್ ಅವರನ್ನು ಶಾಲು ಹೊದಿಸಿ, ಸನ್ಮಾನಿಸಿ, ಗೌರವಿಸಿದರು.

ಸಮಾಜದ ಮುಖಂಡರುಗಳಾದ ಎಂ.ಕೆ. ಬಕ್ಕಪ್ಪ, ಬೂಸ್ನೂರ್ ವಿಶ್ವನಾಥ್, ಎನ್.ಕೆ. ಬಕ್ಕಣ್ಣ, ಅಡಿಕೆ ಬಕ್ಕೇಶ್, ಎನ್.ಕೆ. ಕೊಟ್ರೇಶ್, ಹರಿಹರದ ನಾಗರಾಜ್, ನಗರ ಪಾಲಿಕೆ ಸದಸ್ಯ ಶಿವನಗೌಡ ಪಾಟೀಲ್, ಮುಖಂಡ ಟಿಂಕರ್ ಮಂಜಣ್ಣ ಮತ್ತಿತರರು ಉಪಸ್ಥಿತರಿದ್ದರು.

ಸುಶ್ರುತ ಆರೋಗ್ಯ ಪ್ರತಿಷ್ಠಾನ(ರಿ), ದಾವಣಗೆರೆ.
**ಸುಶ್ರುತ ಆಯುರ್ವೇದ ಆಸ್ಪತ್ರೆ**
ನಂ. 154/1, ಶ್ರೀರಾಮನಗರದ ಹತ್ತಿರ, ಶ್ರೀದೇವಿ ರೈಸ್ ಮಿಲ್ ಹಿಂಭಾಗ, ಪಾಮೇನಹಳ್ಳಿ ಚಾನಲ್‌ರಸ್ತೆ, ದಾವಣಗೆರೆ–577 005
**"ಸ್ವರ್ಣ ಪ್ರಾಶನ ಅಭಿಯಾನ"**
ಸ್ವರ್ಣಬಿಂದು ಪ್ರಾಶನಪ್ರತಿ ತಿಂಗಳು ಪುಷ್ಯ ನಕ್ಷತ್ರದಂದು 'ಹುಟ್ಟಿದ ದಿನದಿಂದ 16 ವರ್ಷದ ಮಕ್ಕಳಿಗೆ ಸ್ವರ್ಣ ಪ್ರಾಶನ ಔಷಧಿಯನ್ನು ಹಾಕಿಸಿ'.
ಸ್ವರ್ಣ ಪ್ರಾಶನದಿಂದಾಗುವ ಲಾಭಗಳು
* ಸ್ವರ್ಣ ಪ್ರಾಶನವು ನಿಮ್ಮ ಮುದ್ದಾದ ಮಗುವಿನ ಬಂಗಾರದ ಕವಚ,ಇದು ಮಕ್ಕಳಲ್ಲಿ ಧೀರ್ಘಾಯು, ಬಲವರ್ಧನೆಗೆ ಸಹಕಾರಿ.
* ಕೋವಿಡ್‌ನಂತಹಎಲ್ಲಾ ರೋಗಗಳ ವಿರುದ್ಧ ಪ್ರತಿ ನಿರೋಧಕ ಶಕ್ತಿಯ ಬೆಳವಣಿಗೆ., * ಮಕ್ಕಳ ಸಂಪೂರ್ಣ ಶಾರೀರಿಕ ಹಾಗೂ ಮಾನಸಿಕ ವಿಕಾಸ.
* ಮಕ್ಕಳ ಏಕಾಗ್ರತೆ, ಗ್ರಹಣ ಶಕ್ತಿ, ಬುದ್ಧಿ ಶಕ್ತಿ ಮತ್ತು ಸ್ಮರಣಶಕ್ತಿ ವೃದ್ಧಿ.
* ಮಕ್ಕಳಿಗೆ ಪದೇ-ಪದೇಕಾಡುವ ಶೀತ, ಜ್ವರ, ಕೆಮ್ಮು, ಅಲರ್ಜಿಗಳನ್ನು ತಡೆಗಟ್ಟುತ್ತದೆ., * ಯಾವುದೇರೀತಿಯ ಅಡ್ಡಪರಿಣಾಮಗಳಿಲ್ಲದೇ ಮಗುವಿನ ಬೆಳವಣಿಗೆಗೆ ಸಹಾಯವಾಗುತ್ತದೆ.
ನಿಮ್ಮ ಮಕ್ಕಳನ್ನು ಕರೋನಾದಂತಹ ರೋಗಗಳಿಂದ ರಕ್ಷಿಸಿಕೊಳ್ಳಿ
ದಿನಾಂಕ:01–10–2021ನೇ ಶುಕ್ರವಾರ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ
ಎಸ್.ಎಸ್. ಆಸ್ಪತ್ರೆ, ರಾಮನಗರಕ್ಕೆ ಹೋಗುವ ನಗರ ಸಾರಿಗೆ ಬಸ್‌ಗಳು ಸುಶ್ರುತ ಆಸ್ಪತ್ರೆಗೂ ಹೋಗುತ್ತವೆ.
ಮುಂಚಿತವಾಗಿ ಹೆಸರನ್ನು ನೋಂದಾಹಿಸಿಕೊಳ್ಳಿ.
ಸಂಪರ್ಕಿಸಿ: 98458 30183, 6360534342

# ದುಗ್ಗಮ್ಮನ ದೇವಸ್ಥಾನದಲ್ಲಿ ಇಂದಿನಿಂದ ದಾಸೋಹ



ದಾವಣಗೆರೆ, ಸೆ.30- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ನಾಳೆ ದಿನಾಂಕ 1ರ ಶುಕ್ರವಾರದಿಂದ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಭಕ್ತಾದಿಗಳಿಗೆ ದಾಸೋಹವನ್ನು ಪುನರಾರಂಭಿಸಲಾಗುವುದು.

ಕೋವಿಡ್ - 19 ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಸ್ಥಗಿತಗೊಳಿಸಲಾ ಗಿದ್ದ ದಾಸೋಹವನ್ನು ನಾಳೆಯಿಂದ ಪುನರಾರಂಭಿಸಲಾಗುತ್ತಿದೆ ಎಂದು ದೇವಸ್ಥಾನ ಟ್ರಸ್ಟ್ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

# ದೂಡಾ ಅಧ್ಯಕ್ಷರಿಗೆ ರಂಭಾಪುರಿ ಜಗದ್ಗುರುಗಳ ಆಶೀರ್ವಾದ



ದಾವಣಗೆರೆ, ಸೆ.30- ಕಾರ್ಯ ನಿಮಿತ್ತ ಮೊನ್ನೆ ನಗರಕ್ಕೆ ಆಗಮಿಸಿದ್ದ ರಂಭಾಪುರಿ ಜಗದ್ಗುರುಗಳು, ಜಿಲ್ಲಾ ವೀರಶೈವ ಸದ್ಬೋಧನಾ ಸಮಿತಿ ಅಧ್ಯಕ್ಷರೂ ಆಗಿರುವ ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್ ಅವರನ್ನು ಸನ್ಮಾನಿಸುವುದರ ಮೂಲಕ ಆಶೀರ್ವದಿಸಿದರು.

# ಹೊನ್ನಾಳಿ : ಗೊಬ್ಬರದ ವ್ಯಾಪಾರಿಗೆ 1.75 ಲಕ್ಷ ವಂಚನೆ

ದಾವಣಗೆರೆ, ಸೆ.30- ಗೊಬ್ಬರದ ಡೀಲರ್ ಶಿಪ್ ಗಾಗಿ ಹುಡುಕಾಟ ನಡೆಸುತ್ತಿದ್ದ ಗೊಬ್ಬರದ ವ್ಯಾಪಾರಿಯೋರ್ವ ಸಾಮಾಜಿಕ ಜಾಲ ತಾಣದಲ್ಲಿನ ಜಾಹೀರಾತು ನಂಬಿ 1.75 ಲಕ್ಷ ರೂ. ಮೋಸ ಹೋದ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊನ್ನಾಳಿ ತಾಲ್ಲೂಕು ಬೆನಕನಹಳ್ಳಿಯ ಬೆನಕಪ್ಪ ವಂಚನೆಗೊಳಗಾದ ಗೊಬ್ಬರದ ವ್ಯಾಪಾರಿ. ಬೆನಕಪ್ಪ ಅವರು ತನ್ನ ಫೇಸ್ ಬುಕ್ ಖಾತೆಗೆ ಬಂದ ಎನ್ ಎಫ್ ಎಲ್ ಕಂಪನಿಯ ಜಾಹೀರಾತು ನೋಡಿ ಲಿಂಕ್ ಒತ್ತಿದ್ದಲ್ಲದೇ, ಅದರಲ್ಲಿ ತಿಳಿಸಿದಂತೆ ಮಾಹಿತಿ ತುಂಬಿದ್ದಾರೆ. ನಂತರ ಕೆಲ ಮೊಬೈಲ್ ನಂಬರ್ ಗಳಿಂದ ಕರೆ ಮಾಡಿದ ಅಪರಿಚಿತನೋರ್ವ ತಾನು ಎನ್ ಎಫ್ ಎಲ್ ಕಂಪನಿಯವನೆಂದು ಪರಿಚಯ ಮಾಡಿಕೊಂಡು ಇಫ್ಕೋ ಕಂಪನಿಯ ಡೀಲರ್ ಶಿಪ್ ನೀಡುವುದಾಗಿ ನಂಬಿಸಿ ಆನ್ ಲೈನ್ ಮುಖಾಂತರ ಅಪರಿಚಿತನು ಈ ಕೃತ್ಯ ನಡೆಸಿದ್ದಾನೆ.


# 4 ರಂದು ಜಯದೇವ ಜಗದ್ಗುರುಗಳ ಅಮೃತ ಶಿಲೆ ಪ್ರತಿಮೆ ಅನಾವರಣ

ದಾವಣಗೆರೆ,ಸೆ.30-ನಗರದ ಬಸವ ಕೇಂದ್ರ ಶ್ರೀ ಶಿವಯೋಗಾಶ್ರಮದಲ್ಲಿರುವ ಚಿತ್ರದುರ್ಗ ಬೃಹನ್ಮಠದ ಲಿಂ. ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮೀಜಿಯವರ ಗದ್ದುಗೆಯ ಮೇಲೆ ಜಯದೇವ ಜಗದ್ಗುರುಗಳವರ ಅಮೃತ ಶಿಲೆ ಪ್ರತಿಮೆಯನ್ನು ಪ್ರತಿಷ್ಠಾಪಿಸಲು ಸಿದ್ಧತೆ ನಡೆದಿದೆ.

ಇದೇ ದಿನಾಂಕ 4ರ ಸೋಮವಾರ ಸಂಜೆ 4.55ಕ್ಕೆ ತ್ರಿವಿಧ ದಾಸೋಹಿ - ಚಿತ್ರದುರ್ಗ ಬೃಹನ್ಮಠದ ಶೂನ್ಯ ಪೀಠಾಧ್ಯಕ್ಷರಾದ ಶ್ರೀ ಡಾ. ಶಿವಮೂರ್ತಿ ಮುರುಘಾ ಶರಣರು ಜಯದೇವ ಜಗದ್ಗುರುಗಳರ ಅಮೃತಶಿಲೆ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ.

ಜೈಪುರದ ಹೆಸರಾಂತ ಕಲಾವಿದ ಪವನ್ ಅವರು ಜಯದೇವ ಜಗದ್ಗುರುಗಳ ಅಮೃತ ಶಿಲೆ ಪ್ರತಿಮೆಯನ್ನು ನಿರ್ಮಿಸಿದ್ದು, ಇದೇ ದಿನಾಂಕ 3ರ ಭಾನುವಾರ ಈ ಪ್ರತಿಮೆ ನಗರಕ್ಕೆ ಆಗಮಿಸಲಿದೆ ಎಂದು ಬಸವ ಕೇಂದ್ರ ಶ್ರೀ ಶಿವಯೋಗಾಶ್ರಮದ ಶ್ರೀ ಬಸವ ಪ್ರಭು ಸ್ವಾಮೀಜಿ ತಿಳಿಸಿದ್ದಾರೆ.

ಶ್ರೀಮತಿ ಮುರಿಗೆಮ್ಮ ಮತ್ತು ದುರ್ಗದ ಇಟಗಿ ಮುಪ್ಪಣ್ಣನವರ ವಂಶಸ್ಥರಾದ ಶ್ರೀಮತಿ ರುದ್ರಮ್ಮ ಮತ್ತು ದುರ್ಗದ ಇಟಗಿ ಶಿವಪ್ಪನವರ ಸ್ಮರಣಾರ್ಥ ಶ್ರೀಮತಿ ಉಮಾದೇವಿ ಮತ್ತು ದುರ್ಗದ ಇಟಗಿ ಜಯದೇವಪ್ಪ ಮತ್ತು ಕುಟುಂಬ ವರ್ಗದವರು ಅಮೃತ ಶಿಲೆ ಪ್ರತಿಮೆಯ ದಾಸೋಹಿಗಳಾಗಿದ್ದಾರೆ.



**ಸ್ಮರಣೋತ್ಸವ :** ಅಮೃತ ಶಿಲೆ ಪ್ರತಿಮೆ ಅನಾವರಣದ ನಂತರ ಸಂಜೆ 5 ಗಂಟೆಗೆ ಲಿಂ. ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ 65ನೇ ವರ್ಷದ ಸರಳ ರಥೋತ್ಸವ ಏರ್ಪಾಡಾಗಿದೆ. ಶಿವಯೋಗಾಶ್ರಮದಲ್ಲಿ ವಚನ ಗ್ರಂಥ ಮೆರವಣಿಗೆ, ಜಯದೇವ ಜಗದ್ಗುರುಗಳ ಭಾವಚಿತ್ರದೊಂದಿಗೆ ಲಿಂಗಾಯತ ಧರ್ಮ ಗ್ರಂಥವಾದ ಬಸವಾದಿ ಶರಣರ ವಚನ ಸಾಹಿತ್ಯ ಉತ್ಸವ ಜರುಗಲಿದೆ.

ನಂತರ ಸಂಜೆ 6 ಗಂಟೆಗೆ ಆಯೋಜನೆಗೊಂಡಿರುವ ಜಯದೇವ ಜಗದ್ಗುರುಗಳ ಸ್ಮರಣೋತ್ಸವ ಮತ್ತು ಸಂಗೀತೋತ್ಸವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಶಿವಮೂರ್ತಿ ಮುರುಘಾ ಶರಣರು ಮತ್ತು ಸಮ್ಮುಖವನ್ನು ಶ್ರೀ ಬಸವ ಪ್ರಭು ಸ್ವಾಮೀಜಿ ವಹಿಸುವರು. ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದೇವರಮನೆ ಶಿವಕುಮಾರ್ ಮುಖ್ಯ ಅತಿಥಿಯಾಗಿದ್ದಾರೆ.

**ಪ್ರವಚನ :** ಲಿಂ. ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ಮರಣೋತ್ಸವದ ಅಂಗವಾಗಿ ನಾಳೆ ದಿನಾಂಕ 1ರಿಂದ 3 ದಿನಗಳ ಕಾಲ ಪ್ರತಿದಿನ ಸಂಜೆ 6.30ಕ್ಕೆ ಶ್ರೀ ಶಿವಯೋಗಾಶ್ರಮದಲ್ಲಿ ಶ್ರೀ ಜಯದೇವ ಲೀಲೆ ಪ್ರವಚನವನ್ನು ಹಮ್ಮಿಕೊಳ್ಳಲಾಗಿದೆ.

ನಾಳೆ ದಿನಾಂಕ 1ರ ಶುಕ್ರವಾರ ಸಂಜೆ 6.30ಕ್ಕೆ ನಡೆಯಲಿರುವ ಪ್ರವಚನದ ಉದ್ಘಾಟನಾ ಸಮಾರಂಭವನ್ನು ಪಾಲಿಕೆ ಮಹಾಪೌರರಾದ ಎಸ್.ಟಿ. ವೀರೇಶ್ ನೆರವೇರಿಸುವರು. ಚನ್ನಗಿರಿಯ ಪ್ರವಚನಕಾರರಾದ ಮಹಾಂತೇಶ ಶಾಸ್ತ್ರಿಗಳು ಪ್ರವಚನವನ್ನು ನಡೆಸಿಕೊಡಲಿದ್ದು, ಸ್ಥಳೀಯ ವಿರಕ್ತ ಮಠದ ಶ್ರೀ ಬಸವ ಕಲಾ ಲೋಕ ವಚನ ಸಂಗೀತ ಒದಗಿಸಲಿದೆ. ದಿನಾಂಕ 4ರ ಸೋಮವಾರ ಬೆಳಿಗ್ಗೆ 11.30ಕ್ಕೆ ಪ್ರವಚನದ ಮಂಗಲೋತ್ಸವವು ಮುರುಘಾ ಶರಣರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

# ಅಂಧರ ಆಶ್ರಮಕ್ಕೆ ಮನೆ ದಾನ ಮಾಡಿದ ನಿವೃತ್ತ ಪೊಲೀಸ್ ಕಲ್ಲಪ್ಪ

ದಾವಣಗೆರೆ,ಸೆ.30- ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಕಳೆದ 7 ವರ್ಷಗಳ ಹಿಂದೆ ನಿವೃತ್ತರಾಗಿರುವ ನಗರದ ಪಿ.ಕಲ್ಲಪ್ಪ ಅವರು, ತಮಗೆ ಸೇರಿದ ಕೋಟ್ಯಾಂತರ ರೂ. ಮೌಲ್ಯದ ಮನೆಯನ್ನು ಅಂಧರ ಆಶ್ರಮಕ್ಕೆ ದಾನವಾಗಿ ನೀಡಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಜಾಗೃತ ದಳ ಸಬ್ ಇನ್ ಸ್ಪೆಕ್ಟರ್ ಆಗಿದ್ದ ಸಂದರ್ಭದಲ್ಲಿ, 2014 ಮಾರ್ಚ್ 31ರಂದು ನಿವೃತ್ತರಾಗಿದ್ದ ಕಲ್ಲಪ್ಪ ಅವರು, ತಮ್ಮ ಸೇವೆಯ ಕೊನೆಯ ತಿಂಗಳ ವೇತನವನ್ನು ಪೊಲೀಸ್ ಕಲ್ಯಾಣ ನಿಧಿಗೆ ಹಾಗೂ ನಿವೃತ್ತಿ ವೇತನದ ಮೊದಲ ತಿಂಗಳ ಪಿಂಚಣಿ ಹಣವನ್ನು ನಿವೃತ್ತ ಪೊಲೀಸರ ಕಲ್ಯಾಣ ನಿಧಿಗೆ ಸಮರ್ಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಇದೀಗ, ಸ್ಥಳೀಯ ಸರಸ್ವತಿ ಬಡಾವಣೆ 1ನೇ ಮುಖ್ಯ ರಸ್ತೆ, 4ನೇ ತಿರುವಿನಲ್ಲಿರುವ ತಾವು ಸಂಪಾದಿಸಿದ್ದ ಹಣದಲ್ಲಿ ನಿರ್ಮಿಸಿ ವಾಸವಾಗಿದ್ದ ಮನೆಯನ್ನು ಬಾಡಾ ಕ್ರಾಸ್ ಬಳಿಯ ಶ್ರೀ ಗುರು ಪಂಡಿತ ಪಂಚಾಕ್ಷರಿ ಗವಾಯಿಗಳ ಅಂಧರ ಶಿಕ್ಷಣ ಸಮಿತಿಯಡಿಯಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮಕ್ಕೆ ಅವರು ದಾನವಾಗಿ ಕೊಟ್ಟಿದ್ದಾರೆ.





ತಮ್ಮ ಸಂತೃಪ್ತ ಜೀವನಕ್ಕೆ ಪೊಲೀಸ್ ಇಲಾಖೆಗೆ ಋಣಿಯಾಗಿರುವುದಾಗಿ ತಿಳಿಸಿರುವ ಕಲ್ಲಪ್ಪ, ಈ ಹಿನ್ನೆಲೆಯಲ್ಲಿ ತಮ್ಮ ಕೈಲಾದ ನೆರವು ನೀಡುವ ನಿಟ್ಟಿನಲ್ಲಿ ಪೊಲೀಸ್ ಕಲ್ಯಾಣ ನಿಧಿ ಮತ್ತು ನಿವೃತ್ತ ಪೊಲೀಸರ ಕಲ್ಯಾಣ ನಿಧಿಗೆ ದೇಣಿಗೆ ನೀಡಿದ್ದೇನೆ ಎಂದು ಅವರು ಭಾವುಕರಾಗಿ ನುಡಿದಿದ್ದಾರೆ.

ಪೊಲೀಸ್ ಇಲಾಖೆಯಲ್ಲಿ 39 ವರ್ಷಗಳ ಸುದೀರ್ಘ ಕಾಲ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿರುವ ಕಲ್ಲಪ್ಪ, ಮೃದು ಸ್ವಭಾವದವರಾಗಿದ್ದು, ಸರಳ - ಸಜ್ಜನಿಕೆಗೆ ಹೆಸರಾಗಿದ್ದಾರೆ. ಪೊಲೀಸರು ದೇಶಕ್ಕೆ ಸಲ್ಲಿಸುತ್ತಿರುವ ಸೇವೆಯನ್ನು ಮೆಲುಕು ಹಾಕಿರುವ ಅವರು, ಪೊಲೀಸರ ಕಠಿಣ ಸೇವೆಯನ್ನು ಸ್ವತಃ ತಾವು ಅರಿತಿರುವ ಕಾರಣ, ತಮ್ಮ ಸಹೋದ್ಯೋಗಿಗಳಿಗೆ ಸಹಾಯ ಹಸ್ತ ಚಾಚುವ ದಿಸೆಯಲ್ಲಿ ಈ ದೇಣಿಗೆ ನೀಡಿದ್ದೇನೆ ಎಂದು ತಿಳಿಸಿದ್ದಾರೆ.

**ಗೌರವಾರ್ಪಣೆ:** ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಕಳೆದ ವಾರ ನಡೆದ ಪರಮಪೂಜ್ಯ ಗಾನ ಯೋಗಿ ಲಿಂ.ಪಂ. ಪಂಚಾಕ್ಷರಿ ಗವಾಯಿಗಳವರ 77ನೇ ಪುಣ್ಯ ಸ್ಮರಣೋತ್ಸವ, ಪದ್ಮಭೂಷಣ ಲಿಂ.ಡಾ.ಪಂಡಿತ ಪುಟ್ಟರಾಜ ಗವಾಯಿಗಳವರ 11ನೇ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ, ತಾವು ವಾಸವಾಗಿದ್ದ ಮನೆಯನ್ನು ಶ್ರೀ ವೀರೇಶ್ವರ ಪುಣ್ಯಾಶ್ರಮಕ್ಕೆ ದಾನ ಮಾಡಿರುವ ನಿವೃತ್ತ ಪೊಲೀಸ್ ಅಧಿಕಾರಿ ಕಲ್ಲಪ್ಪ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು.

# ಅರಣ್ಯ ಇಲಾಖೆಯಿಂದ ನಾಳೆ ವನ್ಯಜೀವಿ ಛಾಯಾಚಿತ್ರ ಪ್ರದರ್ಶನ



ದಾವಣಗೆರೆ, ಸೆ.30- ಕರ್ನಾಟಕ ಅರಣ್ಯ ಇಲಾಖೆ ಮತ್ತು ದಾವಣಗೆರೆ ಪಕ್ಷಿ ವೀಕ್ಷಕರ ಸಂಘದಿಂದ ನಾಡಿದ್ದು ದಿನಾಂಕ 2ರ ಶನಿವಾರದಿಂದ ಇದೇ ದಿನಾಂಕ 6 ರವರೆಗೆ ಪ್ರತಿದಿನ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಮತ್ತು ಸಂಜೆ 4.30 ರಿಂದ 7 ರವರೆಗೆ ವನ್ಯಜೀವಿ ಛಾಯಾಚಿತ್ರ ಪ್ರದರ್ಶನವನ್ನು ನಗರದ ಜಿಲ್ಲಾ ಪಂಚಾಯತ್ ಕಚೇರಿ ಬಳಿ ಇರುವ ಅರಣ್ಯ ಭವನದಲ್ಲಿ ಏರ್ಪಡಿಸಲಾಗಿದೆ.

# ಎಸ್.ಎಂ. ಮಲ್ಲಿಕಾರ್ಜುನಯ್ಯ ಅವರಿಗೆ 'ಅತ್ಯುತ್ತಮ ಶಿಕ್ಷಕ' ಪ್ರಶಸ್ತಿ



**ಹರಪನಹಳ್ಳಿ**

ಹರಪನಹಳ್ಳಿ, ಸೆ.30- ಪಟ್ಟಣದ ಜೋಯಿಸರಕೇ ರಿಯಲ್ಲಿರುವ ನ್ಯಾಷನಲ್ ಆಂಗ್ಲ ಮಾಧ್ಯಮ ಪ್ರೌಢ ಶಾಲಾ ಮುಖ್ಯ ಶಿಕ್ಷಕ ಎಸ್.ಎಂ. ಮಲ್ಲಿಕಾರ್ಜುನಯ್ಯ ಅವರು ಈ ಸಾಲಿನ ರುಪ್ಸಾ ಕರ್ನಾಟಕ ರಾಜ್ಯ ಮಟ್ಟದ 'ಅತ್ಯುತ್ತಮ ಶಿಕ್ಷಕ' ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಶಿಕ್ಷಕರ ದಿನಾಚರಣೆ ಅಂಗವಾಗಿ ಮಾನ್ಯತೆ ಪಡೆದ ಅನುದಾನ ರಹಿತ ಖಾಸಗಿ ಶಾಲೆಗಳ ಸಂಘದ (ರುಪ್ಸಾ ಕರ್ನಾಟಕ) ವತಿಯಿಂದ ಕೊಡಮಾಡುವ ಪ್ರಶಸ್ತಿಯನ್ನು ಬುಧವಾರ ಬೆಂಗಳೂರಿನ ನಾಗದೇವನಹಳ್ಳಿಯ ಸಾಂದೀಪಿನಿ ಹೈಟೆಕ್ ಸ್ಕೂಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನಯ್ಯ ಅವರಿಗೆ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಮಾರ್ಡನ್ ವಿದ್ಯಾಸಂಸ್ಥೆಯ ಅಧ್ಯಕ್ಷೆ ಎಸ್. ಶೋಭಾ ಸಂಡೂರ್, ಕಾರ್ಯದರ್ಶಿ ಪದ್ಮಾ ಎನ್. ಮಂಚಾಲಿ, ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಮರಿಕುಂಟೆ ಚನ್ನಬಸಪ್ ಮತ್ತಿತರರು ಮಲ್ಲಿಕಾರ್ಜುನಯ್ಯ ಅವರನ್ನು ಅಭಿನಂದಿಸಿದ್ದಾರೆ.

# ಹರ ವಿವಿಧೋದ್ದೇಶ ಸಹಕಾರಿಯಿಂದ ಶೇ.10 ಡಿವಿಡೆಂಟ್ ಘೋಷಣೆ

ದಾವಣಗೆರೆ, ಸೆ. 30- ಪ್ರಗತಿಯ ಮುಂಚೂಣಿಯಲ್ಲಿರುವ ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತವು 2020-21ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕೆ ರೂ 40.17.ಲಕ್ಷಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ. 10ರಷ್ಟು ಷೇರು ಲಾಭಾಂಶ ಘೋಷಣೆ ಮಾಡಿದೆ ಎಂದು ಸಹಕಾರಿಯ ಅಧ್ಯಕ್ಷ ಬಿ.ಸಿ. ಉಮಾಪತಿ ಹರ್ಷ ವ್ಯಕ್ತಪಡಿಸಿದರು.

ನಗರದ ಡಾ|| ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳವರ ಮಠದಲ್ಲಿ ಮೊನ್ನೆ ಜರುಗಿದ ಸಹಕಾರಿಯ 9ನೇ ಸಾಮಾನ್ಯ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕೋವಿಡ್ 19 ಪರಿಸ್ಥಿತಿಯಲ್ಲೂ ಸಹಕಾರಿಯ ಠೇವಣಿ ಸಂಗ್ರಹ ಹಾಗೂ ಸಾಲ ವಸೂಲಾತಿಯಲ್ಲಿ ಗಮನಾರ್ಹ ಪ್ರಗತಿ ಕಂಡಿದ್ದು ಇದಕ್ಕೆ ಸದಸ್ಯರ ಸಹಕಾರವೇ ಪ್ರಮುಖ ಕಾರಣ ಎಂದು ಹೇಳಿದರು.

ಷೇರು ಸಂಗ್ರಹಣೆಯಲ್ಲಿಯೂ ಗಮನಾರ್ಹ ಪ್ರಗತಿ ಕಂಡಿದ್ದು, ಸಹಕಾರಿಯಲ್ಲಿ ಕಳೆದ ಸಾಲಿನಲ್ಲಿ 1.01 ಲಕ್ಷ ರೂ. ಷೇರು ಬಂಡವಾಳವಿದ್ದು , ಆರ್ಥಿಕ ವರ್ಷಾಂತ್ಯಕ್ಕೆ 1.13 ಕೋಟಿ ರೂ. ಷೇರು ಬಂಡವಾಳ ಹೊಂದಿದೆ. ಕಳೆದ ಸಾಲಿನಲ್ಲಿ 8.49 ಕೋಟಿ ರೂ. ಠೇವಣಿ ಸಂಗ್ರಹವಾಗಿದ್ದು, ಆರ್ಥಿಕ ವರ್ಷಾಂತ್ಯಕ್ಕೆ 10.01 ಕೋಟಿ ರೂ. ಠೇವಣಿ ಸಂಗ್ರಹವಾಗಿದೆ. ಪ್ರಸ್ತುತ 7.50 ಕೋಟಿ ರೂ.ಸಾಲವನ್ನು ಸದಸ್ಯರಿಗೆ ವಿತರಿಸಲಾಗಿದೆ ಎಂದು ತಿಳಿಸಿದರು.



ಸಹಕಾರಿಯ ನಿರ್ದೇಶಕ ಬಾದಾಮಿ ಚಂದ್ರಶೇಖರ್, ಸ್ವಾಗತಿಸಿದರು. ಶ್ರೀಮತಿ ವಿನುತಾ ಎಂ.ಮಾಗಾನಹಳ್ಳಿ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ ಮಂಡಿಸಿದರು. ನಿರ್ದೇಶಕ ಅಂದನೂರು ಮುರುಗೇಶಪ್ಪ ಕಳೆದ ಸಾಲಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡಿದರು. ನಿರ್ದೇಶಕರಾದ ಶ್ರೀಮತಿ ಗೀತಾ ಪ್ರಶಾಂತ್ 2020-21ನೇ ಸಾಲಿನ ಆಡಳಿತ ವರದಿ ಮಂಡಿಸಿದರು. ಕಾರ್ಯದರ್ಶಿ ಕೆ. ಚನ್ನಮಲ್ಲಿಕಾರ್ಜುನ್, ಲಾಭ-ನಷ್ಟ ಮತ್ತು ಅಢಾವೆ ಪತ್ರ ಹಾಗೂ ಲೆಕ್ಕಪರಿಶೋಧನಾ ವರದಿಯ ಸೂಚನೆಗಳಿಗೆ ಆಡಳಿತ ಮಂಡಳಿಯು ಸಲ್ಲಿಸಿದ ಪಾಲನಾ ವರದಿಯನ್ನು ಮಂಡಿಸಿ ಸಭೆಯ ಅನುಮೋದನೆ ಪಡೆದರು. ಉಪಾಧ್ಯಕ್ಷ ಎಂ.ದೊಡ್ಡಪ್ಪ ಲಾಭ ವಿಲೇವಾರಿಯನ್ನು ಬಗ್ಗೆ ಸಭೆಯ ಮುಂದೆ ಮಂಡಿಸಿ ಶೇ.10ರಷ್ಟು ಲಾಭಾಂಶ ಘೋಷಿಸಿದರು.

ವಿಶೇಷ ಆಹ್ವಾನಿತರಾದ ಚೈತನ್ಯಕುಮಾರ್ ಬಿ.ಸಿ., ಮುಂಗಡ ಪತ್ರ ಮಂಡಿಸಿದರು. ಹಾಲೇಶ ಅಂಗಡಿ, ವಾರ್ಷಿಕ ಕಾರ್ಯಚರಣೆ ಯೋಜನೆ ಮಂಡಿಸಿದರು. ಪಿ.ವಿ. ರವಿಕುಮಾರ್, ಲೆಕ್ಕಪರಿಶೋಧಕರ ನೇಮಕಾತಿಗೆ ಅನುಮೋದನೆ ಪಡೆದುಕೊಂಡರು. ಜಿ.ವಿ. ಸುಂಕದ್, ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಬಗ್ಗೆ ಸಂಕ್ಷಿಪ್ತ ವರದಿ ಮಂಡಿಸಿದರು.

ಎಸ್.ಎಸ್.ಎಲ್.ಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ 8 ವಿದ್ಯಾರ್ಥಿಗಳು, 17 ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ತಲಾ ಸಾವಿರ ರೂ. ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಸಕಾಲಕ್ಕೆ ಸಾಲ ಮುರುಪಾವತಿ ಮಾಡಿದ ಸದಸ್ಯರನ್ನು ಸನ್ಮಾನಿಸಲಾಯಿತು.

ನಿರ್ದೇಶಕರುಗಳಾದ ಮಲ್ಲನಗೌಡ ಎಸ್., ಹೆಚ್. ಎಸ್.ಅವ್ವಣ್ಣಪ್ಪ, ರಮೇಶ ಡಿ., ಲೆಕ್ಕಪರಿಶೋಧಕ ಕೆ. ಎಸ್. ಮುರುಗೇಂದ್ರಪ್ಪ ಉಪಸ್ಥಿತರಿದ್ದರು. ಹಾಲೇಶ ಅಂಗಡಿ ವಂದಿಸಿದರು. ಅಂಗಡಿ ಸಂಗಮೇಶ್ ಹಾಗೂ ಕಲಿವೀರ ಕಳ್ಳಿಮನಿ, ಬಿ.ಬಸವರಾಜ ಉಚ್ಚಂಗಿದುರ್ಗ ಕಾರ್ಯಕ್ರಮ ನಿರೂಪಿಸಿದರು.

# ಪಂಚಮಸಾಲಿ ಮೆರವಣಿಗೆಗೆ ಕಲಾ ತಂಡಗಳ ಮೆರಗು

ದಾವಣಗೆರೆ, ಸೆ. 30- ಲಿಂಗಾಯತ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ಅಭಿಯಾನ ಹಾಗೂ ರಾಜ್ಯ ಯುವ ಘಟಕದ ಅಧ್ಯಕ್ಷರ ಪದಗ್ರಹಣ ಸಮಾರಂಭದ ಅಂಗವಾಗಿ ನಗರದಲ್ಲಿ ಕಲಾ ತಂಡಗಳೊಂದಿಗೆ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿಗಳ ಭವ್ಯ ಮೆರವಣಿಗೆ ನಡೆಯಿತು.

ಶ್ರೀ ಅಭಿನವ ರೇಣುಕಾ ಮಂದಿರದಿಂದ ತ್ರಿಶೂಲ್ ಕಲಾ ಭವನದ ವರೆಗೆ ಸಾಗಿದ ಮೆರವಣಿಗೆಯಲ್ಲಿ ಜಾನಪದ ಕಲಾ ತಂಡಗಳ ಮೇಳವೇ ಇತ್ತು. ವೀರ ರಾಣಿ ಕಿತ್ತೂರು ಚೆನ್ನಮ್ಮ, ಲಿಂ.ಶ್ರೀ ಮಹಾಂತ ಮಹಾಸ್ವಾಮೀಜಿ ಹಾಗೂ ಶ್ರೀ ಬಸವೇಶ್ವರರ ಭಾವಚಿತ್ರ ಹೊತ್ತ ಮೂರು ಆನೆಗಳು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದವು.

ನಂತರ ನಂದಿಕೋಲು, ಸಮಾಳ, ಡೊಳ್ಳು, ಕೀಲು ಕುದುರೆ, ಗೊಂಬೆಗಳು, ವಿವಿಧ ರೀತಿಯ ವಾದ್ಯಗಳನ್ನು ನುಡಿಸುವ ತಂಡಗಳು ಪಾಲ್ಗೊಂಡಿದ್ದವು. ಮೆರವಣಿಗೆಯ ಕುಂಭಮೇಳದಲ್ಲಿ ನೂರಾರು ಮಹಿಳೆಯರು ಪಾಲ್ಗೊಂಡಿದ್ದರು.

ತೆರೆದ ವಾಹನದಲ್ಲಿ ಶ್ರೀ ಬಸವ ಜಯಮೃತ್ಯುಂಜಯ ಶ್ರೀಗಳು, ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಯುವ ಘಟಕದ ಅಧ್ಯಕ್ಷ ಬಿ.ಜಿ. ಅಜಯ್ ಕುಮಾರ್ ಇದ್ದರು. ದಾರಿಯುದ್ದಕ್ಕೂ ಭಕ್ತರು ಶ್ರೀಗಳಿಗೆ ಹೂವಿನ ಮಳೆ ಸುರಿಸುತ್ತಿದ್ದರು. ಲಿಂಗಾಯತ ಪಂಚಮಸಾಲಿ ಎಂದು ಬರೆದಿದ್ದ ಕೇಸರಿ ಬಾವುಟಗಳು, ಹರಹರ ಮಹಾದೇವಾ ಎಂಬ ಘೋಷಣೆಗಳು ಮುಗಿಲು ಮುಟ್ಟಿದ್ದವು.

# ಹೊನ್ನಾಳಿ ಪುರಸಭೆ ಪ್ರಭಾರ ಅಧ್ಯಕ್ಷೆಯಾಗಿ ರಂಜಿತ ಚನ್ನಪ್ಪ




ಹೊನ್ನಾಳಿ, ಸೆ.30 - ಪುರಸಭೆಯ ಪ್ರಭಾರ ಅಧ್ಯಕ್ಷರಾಗಿ ಇಂದು ರಂಜಿತ ಚನ್ನಪ್ಪ ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿದ್ದ ಕೆ.ವಿ. ಶ್ರೀಧರ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಈ ಆಯ್ಕೆ ಪ್ರಕ್ರಿಯೆ ನಡೆದಿದೆ.

# ನಾಳೆ ಮಾಂಸ ಮಾರಾಟ ನಿಷೇಧ

ದಾವಣಗೆರೆ, ಸೆ.30- ನಾಡಿದ್ದು ದಿನಾಂಕ 2 ರಂದು ಮಹಾತ್ಮಗಾಂಧಿ ಜಯಂತಿ ಪ್ರಯುಕ್ತ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಮಹಾನಗರ ಪಾಲಿಕೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# 5 ಪಾಸಿಟಿವ್, 8 ಗುಣಮುಖ

ದಾವಣಗೆರೆ, ಸೆ.30- ತಾಲ್ಲೂಕಿನ 5 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 8 ಜನರು ಗುಣಮುಖರಾದ ಬಗ್ಗೆ ಜಿಲ್ಲಾಡಳಿತದ ಪ್ರಕಟಣೆ ತಿಳಿಸಿದೆ. 61 ಸಕ್ರಿಯ ಸೋಂಕು ಪ್ರಕರಣಗಳಿವೆ.


**ಹೃದಯಪೂರ್ವಕ ಅಭಿನಂದನೆಗಳು**



2020-21ನೇ ಸಾಲಿನಲ್ಲಿ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ

**ಕು. ಅನೀಷ್ ಎನ್. ಜೈನ್**

ಇವರು ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜ್, ದಾವಣಗೆರೆಯಲ್ಲಿ ಖಾಸಗಿ ಅಭ್ಯರ್ಥಿಯಾಗಿ ವಾಣಿಜ್ಯ ವಿಭಾಗದಲ್ಲಿ ದಾಖಲಾತಿಯನ್ನು ಪಡೆದು, ಒಟ್ಟು 600 ಅಂಕಗಳಿಗೆ 472 ಅಂಕಗಳನ್ನು ಗಳಿಸಿ, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ಕಾಲೇಜಿನಲ್ಲಿಯೇ ಅತೀ ಹೆಚ್ಚು ಅಂಕಗಳನ್ನು ಪಡೆದಿರುವ ಇವರಿಗೆ

**ಹೃದಯಪೂರ್ವಕ ಅಭಿನಂದನೆಗಳು..**

ಕಾಲೇಜಿನ ಪ್ರಾಚಾರ್ಯರು ಮತ್ತು ಸಿಬ್ಬಂದಿ ವರ್ಗದವರು

ತಂದೆ : ಶ್ರೀ ನಿತಿನ್ ಬಿ. ಜೈನ್

ತಾಯಿ : ಶ್ರೀಮತಿ ಹೇಮಲತಾ ಎನ್. ಜೈನ್, ದಾವಣಗೆರೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte